WPP No. SK/MNG/WPP/69 D.O.P - 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ

ಮಾಸಪತ್ರಿಕೆ - 15 ಮಾರ್ಚ್ 2011

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-11 ಸಂಚಿಕೆ-3 ಪುಟಗಳು-8 Registered Under No.J/UDP/1260/2009-2011 Dated from 01-12-2008 to 30-11-2011.

ಸುಬ್ರಹ್ಮಣ್ಯ ಸಭಾ (ರಿ.), ಬಿಜೈ ರಸ್ತೆ, ಮಂಗಳೂರು : ಕಿರುಪ್ರವಾಸ



ಪಿ. ಶ್ರೀಕಾಂತ ರಾವ್
ಪುಟ-4

ಶ್ರೀ ಕೃಷ್ಣಾಯನ
- ಕೆ. ಆತ್ಮಾರಾಮ ಶಾಸ್ತ್ರಿ, ಬೆಂಗಳೂರು
ಪುಟ-2



ಕುಮಾರವ್ಯಾಸನ ಕೃಷ್ಣ ಸ್ತುತಿ
- ವೈ. ಶಂಕರನಾರಾಯಣ ರಾವ್, ಪಡುಬಿದ್ರಿ
ಪುಟ-5

ಸೇವೆ
ಸಾಂತೂರು ಸದಾಶಿವ ರಾವ್
ಪುಟ-4

## ಶ್ರೀಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಆಚರಣೆ

ತಾ.02-03-2011ರಂದು ಬುಧವಾರ ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಬ್ರಹ್ಮಶ್ರೀ ಪಾವಂಜೆ ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ ಬೆಳಿಗ್ಗೆಯಿಂದ ರುದ್ರಾಭಿಷೇಕ, ಪಾರಾಯಣ, ಆರಾಧನೆ, ಭಜನೆ ಮತ್ತು ವಿಶೇಷ ಪೂಜೆ ಜರಗಿತು.

ಶಿವರಾತ್ರಿಯ ಪರ್ವಕಾಲದಲ್ಲಿ ಶಿವನ ಆರಾಧನೆ, ಶಿವಲಿಂಗಪೂಜೆ, ಶಿವರಾತ್ರಿ ಜಾಗರಣೆಯಿಂದ ಪರಮೇಶ್ವರನು ಸಂತೃಪ್ತನಾಗಿ ಸರ್ವರಿಗೂ ಸುಖಶಾಂತಿ ನೆಮ್ಮದಿ ಕರುಣಿಸುವನೆಂಬ ಪ್ರತೀತಿ ಇದೆ. ಆದರಂತೆ ಶಿವಭಕ್ತರಾದ ನಾವು ಪ್ರತಿ ವರ್ಷವೂ ಶಿವರಾತ್ರಿಯಂದು ರುದ್ರಪಠಣ, ರುದ್ರಾಭಿಷೇಕ, ಭಜನೆ ಹಾಗೂ ವಿಶೇಷ ಪೂಜೆಯನ್ನು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ವತಿಯಿಂದ ಶ್ರೀಶಾರದಾ ದೇವಸ್ಥಾನದಲ್ಲಿ ನಡೆಸಿಕೊಂಡು ಬರುವುದು ಸಂಪ್ರದಾಯ. ಕಳೆದ ವರ್ಷ ಆ ದಿನ ಶಿವಭಕ್ತಿ ಸಂಗೀತ ಕಾರ್ಯಕ್ರಮ ನಡೆದು ಸಮಾಜ ಬಾಂಧವರ ಮನ ಸೆಳೆಯಿತು. ಈ ಬಾರಿ ನಮ್ಮ ಸಮಾಜದ ಹಿರಿಯರೂ, ನಿವೃತ್ತ ಪ್ರಾಧ್ಯಾಪಕರೂ, ಲೇಖಕರೂ, ಯಕ್ಷಗಾನ ಹರಿಕಥೆ ಹೀಗೆ ಹಲವು ರಂಗಗಳಲ್ಲಿ ಹೆಸರು ಪಡೆದವರೂ ಆದ ಹರಿದಾಸ ಶ್ರೀ ಮ.ನಾ. ಹೆಬ್ಬಾರ್ ಇವರಿಂದ ಬೆಳಿಗ್ಗೆ ಸುಮಾರು 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ''ಗಿರಿಜಾ ಕಲ್ಯಾಣ'' ಎಂಬ ಹರಿಕಥಾ ಕಾಲಕ್ಷೇಪ ಜರಗಿತು. ಅವರಿಗೆ ಹಿಮ್ಮೇಳದಲ್ಲಿ ತಬ್ಲಾ ಸಾಥಿಯಾಗಿ ಶ್ರೀ ದೇವದಾಸ ಕೂಡ್ಲಿ ಹಾಗೂ ಹಾರ್ಮೋನಿಯಂನಲ್ಲಿ ಶ್ರೀ ಶ್ರೀನಿವಾಸ ರಾವ್ ಸಹಕರಿಸಿದ್ದರು.

ಇತ್ತೀಚೆಗೆ ಹರಿಕಥೆಯೆಂಬುದು ನಶಿಸಿ ಹೋಗುತ್ತಿರುವ ಈ ಸಂದರ್ಭದಲ್ಲಿ ಶ್ರೀಯುತ ಮ.ನಾ.ಹೆಬ್ಬಾರ್ ಕಾರ್ಯಕ್ರಮವು ಎಲ್ಲರಿಗೂ ಕುತೂಹಲ ಹಾಗೂ ಸಂತೋಷವನ್ನು ಉಂಟು ಮಾಡಿತು. ಉತ್ತಮ ಲೇಖಕರೂ, ವಾಗ್ಮಿಯೂ, ಪ್ರವಚನಕಾರರೂ ಆದ ಶ್ರೀಯುತರು ಉಪಕಥೆ, ಕೀರ್ತನೆ, ಪೀಠಿಕೆಯಿಂದ ಗಿರಿಜಾ ಕಲ್ಯಾಣ ಪ್ರಸಂಗವನ್ನು ಉತ್ತಮವಾಗಿ ನಡೆಸಿಕೊಟ್ಟರು.

ಪ್ರಾರಂಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾಯರು ಹರಿದಾಸರಿಗೆ ಹಾಗೂ ಅವರ ಸಂಗಡಿಗರಿಗೆ ಹಾರ ಹಾಕಿ ಸ್ವಾಗತಿಸಿದರು. ಕೊನೆಯಲ್ಲಿ ಅಧ್ಯಕ್ಷರಾದ ಸಿ.ಎಸ್.ರಾಯರು ಸ್ಮರಣಿಕೆ ನೀಡಿ ಗೌರವಿಸಿದರು. ಮೊದಲಿಗೆ ಎಲ್ಲರನ್ನೂ ಸ್ವಾಗತಿಸಿ, ಹರಿದಾಸ ಮ.ನಾ.ಹೆಬ್ಬಾರ್ ಹಾಗೂ ಅವರ ಬಳಗದವರನ್ನು ಸಂಘದ ಕೋಶಾಧಿಕಾರಿಗಳಾದ ಡಾ| ವೈ. ಸುದರ್ಶನ ರಾವ್ ಪರಿಚಯಿಸಿ ಕೊನೆಯಲ್ಲಿ ಧನ್ಯವಾದವನ್ನಿತ್ತರು.

ಈ ಕಾರ್ಯಕ್ರಮದಲ್ಲಿ ಸಂಘದ ಆಡಳಿತ ಮಂಡಳಿ ಸದಸ್ಯರು, ಯುವವೇದಿಕೆ, ಮಹಿಳಾ ವೇದಿಕೆ, ಹಾಗೂ ವಿವಿಧ ವೇದಿಕೆಯ ಸದಸ್ಯರು, ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ಶಿವರಾತ್ರಿ ಪ್ರಯುಕ್ತ ಆ ದಿನ ಲಘು ಉಪಹಾರ ವ್ಯವಸ್ಥೆಯನ್ನು ಮಾಡಲಾಗಿತ್ತು ಇದರ ಜವಾಬ್ದಾರಿಯನ್ನು ಜತೆ ಕಾರ್ಯದರ್ಶಿಗಳಾದ ಶ್ರೀ ಮಂಜುನಾಥ ಹೆಬ್ಬಾರ್ ವಹಿಸಿದ್ದರು.

## ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರಿಂದ 'ಶೃಂಗೇರಿ ಶ್ರೀಶಾರದಾ ಪೀಠ' ಗ್ರಂಥದ ಬಿಡುಗಡೆ



''ಶೃಂಗೇರಿ ಶ್ರೀಶಾರದಾ ಪೀಠ ಕುರಿತು ಅನೇಕ ಉಪಯುಕ್ತ ಮಾಹಿತಿಗಳನ್ನು ನೀಡುವ ಈ ಗ್ರಂಥ ಸುಂದರವಾಗಿ ಮೂಡಿಬಂದಿದೆ. ಪುಸ್ತಕರಚನೆಗೆ ಬೇಕಾದ ಅನೇಕ ಅಂಶಗಳನ್ನು ತುಂಬ ವ್ಯಾಪಕವಾಗಿ ಸಂಗ್ರಹಿಸಿರುವುದು ಶ್ಲಾಘನೀಯ'' ಎಂದು ದಕ್ಷಿಣಾಮ್ನಾಯ ಶೃಂಗೇರಿ ಶ್ರೀಶಾರದಾಪೀಠಾಧೀಶ್ವರರಾದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರು ಹೇಳಿದರು.

ಶೃಂಗೇರಿ ಜಗದ್ಗುರು ಮಹಾ ಸಂಸ್ಥಾನದ ಪ್ರಾಂತೀಯ ಧರ್ಮಾಧಿಕಾರಿಗಳೂ, ಕುಂದಾಪುರದ ಕೂಟ ಮಹಾಜಗತ್ತು ಅಂಗಸಂಸ್ಥೆಯ ಉಪಾಧ್ಯಕ್ಷರೂ, ಹಿರಿಯ ಲೇಖಕರೂ ಆದ ಡಾ| ಎಚ್.ವಿ.ನರಸಿಂಹ ಮೂರ್ತಿಯವರ 'ಶೃಂಗೇರಿ ಶ್ರೀಶಾರದಾ ಪೀಠ' ಎಂಬ ಗ್ರಂಥವನ್ನು ಇಲ್ಲಿನ ನರಸಿಂಹ ವನದ ಗುರು ನಿವಾಸದಲ್ಲಿ ಬಿಡುಗಡೆಗೊಳಿಸಿ, ಆಶೀರ್ವಚನವನ್ನು ಮಾಡಿದರು.

ಲೇಖಕರಾದ ಡಾ| ಎಚ್.ವಿ.ನರಸಿಂಹ ಮೂರ್ತಿ ಯವರು ಗ್ರಂಥವನ್ನು ಪರಿಚಯಿಸಿ, ಜಗದ್ಗುರುಗಳವರಿಗೆ ಸಮರ್ಪಿಸಿದರು. ಗ್ರಂಥವನ್ನು ಅವಲೋಕಿಸಿ, ಸಂತಸವನ್ನು ವ್ಯಕ್ತಪಡಿಸಿದ ಶ್ರೀ ಶ್ರೀ ಗಳವರು ಮೂರ್ತಿ ದಂಪತಿಗಳಿಗೆ ಫಲಮಂತ್ರಾಕ್ಷತೆ ನೀಡಿ ಅನುಗ್ರಹಿಸಿದರು.



**ಶ್ರೀಶಾರದಾ ದೇವಸ್ಥಾನ,** ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 2. ಫೋನ್ : 2520754

ಪ್ರಿಯರೇ,
ಸ್ವಸ್ತಿ ಶ್ರೀ ವಿಕೃತಿ ನಾಮ ಸಂ।ರದ ಮೇಷ ಮಾಸ ದಿನ ೧೫ ಸಲುವ ಚೈತ್ರ ಕೃಷ್ಣ ದ್ವಾದಶಿ ತಾ.29-04-2011ನೇ ಶುಕ್ರವಾರ ಸಂಜೆ ಗಂಟೆ 5-00ರಿಂದ

**ಪ್ರತಿವರ್ಷದಂತೆ ಪರಿಸರದ ಭಕ್ತ ಬಾಂಧವರು ಭಕ್ತಿ-ಪ್ರೀತಿಯಿಂದ ಪೂಜಿಸಿಕೊಂಡು ಬರುತ್ತಿರುವ**
**ಶ್ರೀಶಾರದಾ ಪರಮೇಶ್ವರೀ ಸನ್ನಿಧಿಯಲ್ಲಿ**

### ಸಾಮೂಹಿಕ ಶ್ರೀದುರ್ಗಾ ನಮಸ್ಕಾರ ಪೂಜೆಯು

ನೆರವೇರಲಿದೆ. ಪಾಲ್ಗೊಳ್ಳಲಿರುವ ಭಕ್ತಾದಿಗಳು ಶ್ರೀಶಾರದಾ ಮಂಟಪದ ಮೆನೇಜರ್‌ರವರಲ್ಲಿ ರೂ.125/-ನ್ನು ಸಲ್ಲಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ. ದುರ್ಗಾಮಾತೆಗೆ ಅರ್ಪಿಸಲು ಹಣ್ಣು, ಹೂವು ಇತ್ಯಾದಿಗಳನ್ನು ಪೂಜಾರಂಭಕ್ಕೆ ಮೊದಲು ತಂದು ನೀಡಬಹುದು. ಪೂಜೆಗೆ ಬರುವಾಗ ಹರಿವಾಣ, ಉದ್ಧರಣೆ ತರಬೇಕಾಗಿ ವಿನಂತಿ.

ಅಪರಾಹ್ನ 3 ರಿಂದ : ದೀಪವಿಟ್ಟು ಮಂಡಲ ರಚನೆ, ಭಕ್ತರು ಹಾಗೂ ಋತ್ವಿಜರಿಂದ ಸಪ್ತಶತೀ ಪಾರಾಯಣ.
ಸಂಜೆ 5 ರಿಂದ : ಶ್ರೀಶಾರದಾ ದೇವಸ್ಥಾನದಲ್ಲಿ ಸಾಮೂಹಿಕ ಪ್ರಾರ್ಥನೆ, ಸೇವಾ ಕರ್ತೃಗಳಿಂದ ಪೂಜಾ ಸಂಕಲ್ಪ, ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ, ಪುಷ್ಪಾಂಜಲಿ ನಮಸ್ಕಾರ, ಮಹಾಪೂಜೆ, ತೀರ್ಥಪ್ರಸಾದ ವಿತರಣೆ, ಭೋಜನ ಪ್ರಸಾದ.

- ಆಡಳಿತ ಮಂಡಳಿ

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಈ ಜಗತ್ತಿನಲ್ಲಿ ಇತರರನ್ನು ಟೀಕಿಸುವ ಜನರು ಎಂದೂ ಕಡಿಮೆಯಾಗಲಾರರು. ''ಅವನು ಈ ತಪ್ಪನ್ನು ಮಾಡಿದ ಅವನು ಆ ಅಪರಾಧವನ್ನು ಗೈದ, ಅವನು ಹಾಗೆ ಮಾಡಿದ್ದರಿಂದ ನಾನು ಹೀಗಾದೆ. ಇಷ್ಟು ನಷ್ಟ ಅನುಭವಿಸಿದೆ'' ಎಂದು ಗೊಣಗುವ ಜನರಿಗೆ ಕೊರತೆಯಿಲ್ಲ.

ಹೀಗೆ ಹೇಳುವ ಜನರು ತಮ್ಮನ್ನು ತಾವು ಆತ್ಮವಿಮರ್ಶೆಗೆ ಒಳಪಡಿಸಿಕೊಳ್ಳಬೇಕು. ಇತರರಿಗೆ, ತಾನಿರುವ ಸಾಮಾಜಿಕ ಪರಿಸರಕ್ಕೆ ಅಥವಾ ದೇಶಕ್ಕೆ ನಾನೇನು ಮಾಡಿದ್ದೇನೆ? ಎಂಬುದನ್ನು ತಿಳಿದುಕೊಳ್ಳಲು ಮೊದಲು ಪ್ರಯತ್ನಿಸಬೇಕು. ಅದರಲ್ಲಿಯೂ ತಾನು ಮಾಡದೆ ಇರುವ ಉತ್ತಮ ಕೆಲಸಗಳಿಲ್ಲದೆ ಇದ್ದರೂ, ''ನಾನು ಸಮಾಜಕ್ಕೆ ಇತರರಿಗೆ ಏನು ತೊಂದರೆ ಕಷ್ಟನಷ್ಟಗಳನ್ನು ಉಂಟು ಮಾಡಿದ್ದೇನೆ?'' ಎಂದು ತಿಳಿಯಬೇಕಾದುದು ಬಹಳ ಪ್ರಾಮುಖ್ಯ.

ತಪ್ಪು ಮಾಡುವುದು ಮಾನವ ಸಹಜ ಗುಣ. ಕೆಲವೊಮ್ಮೆ ಹೆಜ್ಜೆ-ಹೆಜ್ಜೆಗೂ ತಪ್ಪು ಮಾಡುತ್ತಲೇ ಇರುತ್ತಾನೆ. ಆ ಮಾಡಿದ ತಪ್ಪು-ತಪ್ಪೆಂದೇ ತಿಳಿದಿದ್ದರೂ, ತಪ್ಪು ಮಾಡಿದವ ಅದನ್ನು ತಪ್ಪೆಂದು ಒಪ್ಪಿಕೊಳ್ಳುವುದಿಲ್ಲ. ನಾನು ಮಾಡಿರುವುದು ತಪ್ಪೇ ಅಲ್ಲವೆಂದು ವಾದಗಳೆಯುತ್ತಾನೆ. ಮಾಡಿದ ತಪ್ಪನ್ನು ಒಪ್ಪಿಕೊಳ್ಳುವುದೂ ಮಾನವನ ಗುಣಗಳಲ್ಲಿ ಬಹಳ ಶ್ರೇಷ್ಠವೆಂದೇ ಪರಿಗಣಿತವಾಗಿದೆ.

ಇಂದಿನ ಸಮಾಜದಲ್ಲಿ ಇಂತಹ ಜನರಿಗೇನೂ ಕೊರತೆ ಇಲ್ಲ. ತಮ್ಮ ಇಂತಹ ಮನೋಭಾವದಿಂದ ಈ ಜನರು ಒಂದಲ್ಲ ಒಂದು ದಿನ ತಾವೇ ತೋಡಿದ ಗುಂಡಿಯಲ್ಲಿ ಬೀಳುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ಇತರರ ದೋಷಗಳು ನಮ್ಮ ಗಣನೆಗೆ ಬಂದರೂ ನಾವು ಟೀಕಿಸದೆ, ನಮ್ಮಿಂದ ಕಿಂಚಿತ್ತೂ ಅಪರಾಧಗಳು ಆಗದಂತೆ ನಾವು ನೋಡಿಕೊಳ್ಳಬೇಕಾದುದು ನಮ್ಮ ಕರ್ತವ್ಯವಾಗಿರಬೇಕು ಎಂದು ತಿಳಿಯೋಣವೇ?

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರಿ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಅಕ್ರೂರನು ಪುರುವಂಶೀಯರ ಕೀರ್ತಿಯಿಂದ ಅಂಕಿತವಾದ ಹಸ್ತಿನಾಪುರಕ್ಕೆ ಹೋದನು. ಅಲ್ಲಿ ಅವನು ಧೃತರಾಷ್ಟ್ರ, ಭೀಷ್ಮ, ವಿದುರ, ಕುಂತಿ, ಬಾಹ್ಲೀಕ ಮತ್ತವನ ಮಗ, ದ್ರೋಣ, ಕೃಪ, ಕರ್ಣ, ದುರ್ಯೋಧನ, ಅಶ್ವತ್ಥಾಮ, ಪಾಂಡವರು ಮತ್ತು ಇತರ ಮಿತ್ರರು-ಇವರನ್ನೆಲ್ಲ ಕಂಡನು. ಅವರೆಲ್ಲ ಮಥುರೆಯ ಬಂಧುಗಳ ಕ್ಷೇಮ ಸಮಾಚಾರಗಳನ್ನು ವಿಚಾರಿಸಿದರು. ಅಕ್ರೂರನು ಕೆಲವು ತಿಂಗಳುಗಳನ್ನು ಅಲ್ಲೇ ಕಳೆದನು. ಆ ಸಮಯದಲ್ಲಿ ಪಾಂಡವರ ಬಗೆಗೆ ಧೃತರಾಷ್ಟ್ರನ ವರ್ತನೆ ಹೇಗಿದೆ ಎಂಬುದನ್ನು ಕಣ್ಣಾರೆ ಕಂಡನು. ಅವನಿಗೆ ಸ್ವಂತಿಕೆಯೆನ್ನುವುದೇ ಇರಲಿಲ್ಲ. ಸುಯೋಧನನೇ ಮೊದಲಾದ ಕೆಟ್ಟ ಮಕ್ಕಳನ್ನು ನಿಯಂತ್ರಿಸುವ ಶಕ್ತಿ ಅವನಲ್ಲಿರಲಿಲ್ಲ. ಮಕ್ಕಳ ತಾಳಕ್ಕೆ ಸರಿಯಾಗಿ ಕುಣಿಯುತ್ತಿದ್ದನು. ಅವರೋ ತಮಗಿಷ್ಟ ಬಂದಂತೆ ನಡೆದುಕೊಳ್ಳುತ್ತಿದ್ದರು. ಆದುದರಿಂದ ಧೃತರಾಷ್ಟ್ರನಿಗೆ ಪಾಂಡವರನ್ನು ನಿಷ್ಪಕ್ಷಪಾತದಿಂದ ನೋಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಹಾಗೇ ಪಾಂಡವರ ತೇಜಸ್ಸು, ಪರಾಕ್ರಮ, ಸದ್ಗುಣಗಳನ್ನು ಅವರ ಬಗೆಗೆ ಪ್ರಜೆಗಳಲ್ಲಿದ್ದ ಪ್ರೀತ್ಯಾದರಗಳನ್ನೂ ಕಂಡನು. ಕುಂತಿಯು ಸಹೋದರ ಸಮಾನನಾದ ಅಕ್ರೂರನನ್ನು ನೋಡಿ ತುಂಬಾ ಸಂತೋಷಪಟ್ಟಳು. ಅವಳೂ, ವಿದುರನೂ ಪಾಂಡವರನ್ನು ಕೊಲ್ಲಲು ದುರ್ಯೋಧನನು ಹೂಡಿದ ಸಂಚನ್ನು ವಿವರಿಸಿ ಹೇಳಿದರು. ಹಾಗೇ ಕುಂತಿಯು ತನ್ನ ತವರಿನ, ತಂದೆ ತಾಯಿಯರ, ಸೋದರ ಸೋದರಿಯರ, ಸೋದರಳಿಯಂದಿರ, ಸ್ನೇಹಿತೆಯರ ಯೋಗಕ್ಷೇಮಗಳನ್ನು ಕೇಳಿ, ಆ ನೆನಪಿನಿಂದ ಗದ್ಗದಿತಳಾದಳು. ಅವತಾರ ಪುರುಷರಾದ ಶ್ರೀಕೃಷ್ಣ, ಬಲರಾಮರು ಸೋದರತ್ತೆಯಾದ ತನ್ನನ್ನೂ, ತನ್ನ ಮಕ್ಕಳನ್ನೂ ನೆನೆಯುವರೇ ಎಂದೂ ಕೇಳಿದಳು. ತೋಳಗಳ ನಡುವಿನ ಜಿಂಕೆಯಂತೆ ತಾನಿಲ್ಲಿ ಇರುವುದಾಗಿಯೂ ತನ್ನ ದುಃಖವನ್ನು ತೋಡಿಕೊಂಡಳು. ತನ್ನನ್ನೂ, ತನ್ನ ಮಕ್ಕಳನ್ನೂ ನೋಡಲು, ನೋಡಿ ಸಂತೈಸಲು ಕೃಷ್ಣನು ಬರುವನೇ ಎಂದೂ ವಿಚಾರಿಸಿದಳು. ಎಲ್ಲರನ್ನೂ ಜ್ಞಾಪಿಸಿಕೊಳ್ಳುತ್ತಾ ಕುಂತಿ ಜೋರಾಗಿ ಅತ್ತೂ ಬಿಟ್ಟಳು. ಆಗ ಅಕ್ರೂರನೂ, ವಿದುರನೂ ಕುಂತಿಗೆ ಸಾಂತ್ವನ ಹೇಳಿದರು. ಅವಳ ಮಕ್ಕಳು ದಿವ್ಯಜನ್ಮರಾದುದರಿಂದ ಧೈರ್ಯ, ಭರವಸೆಗಳನ್ನು ಕಳೆದುಕೊಳ್ಳಬಾರದೆಂದರು.

ಹಸ್ತಿನಾವತಿಯಿಂದ ಹಿಂದಿರುಗುವ ಮುನ್ನ ಅಕ್ರೂರನು ಧೃತರಾಷ್ಟ್ರನಿಗೆ ನೀತಿಯ ಮಾತುಗಳನ್ನು ಹೇಳಿದನು. ರಾಜನು ರಾಜನೀತಿಗೆ ಅನುಸಾರವಾಗಿ ನಡೆದುಕೊಳ್ಳುವುದು ಶ್ರೇಯಸ್ಕರವೆಂದೂ, ತಂದೆಯನ್ನು ಕಳೆದುಕೊಂಡ ಪಾಂಡವರನ್ನು ಆತ್ಮೀಯತೆಯಿಂದ, ನಿಷ್ಪಕ್ಷಪಾತಿತೆಯಿಂದ ನೋಡಿಕೊಳ್ಳಬೇಕೆಂದು ಉಪದೇಶಿಸಿದನು. ಧೃತರಾಷ್ಟ್ರನು ಅಕ್ರೂರನ ಮಾತುಗಳನ್ನು ಬಹಳ ಗೌರವದಿಂದ ಕೇಳಿ ಅವನಿಗೆ ಧನ್ಯವಾದಗಳನ್ನಿತ್ತನು. ಆದರೆ ತಾನು ಪುತ್ರಮೋಹಕ್ಕೆ ಒಳಗಾಗಿರುವುದರಿಂದ ಅಕ್ರೂರನ ಮಾತುಗಳಂತೆ ನಡೆದುಕೊಳ್ಳಲು ಅಸಮರ್ಥನಾಗಿರುವುದಾಗಿ ವಿಷಾದ ವ್ಯಕ್ತಪಡಿಸಿದನು. ಹಾಗೇ ಯದುಕುಲದಲ್ಲಿ ಭಗವಂತನ ಅವತಾರವಾಗಿರುವುದಕ್ಕೆ ಹರ್ಷಿಸಿ, ಅವನಿಗೆ ತನ್ನ ಭಕ್ತಿಪೂರ್ಣ ನಮನಗಳನ್ನು ಸಲ್ಲಿಸಿದನು. ಅಕ್ರೂರನು ಹಸ್ತಿನಾಪುರದ ವಿದ್ಯಮಾನಗಳನ್ನು ಆಮೂಲಚೂಲ ಅರಿತುಕೊಂಡು ಮಥುರೆಗೆ ಹಿಂದಿರುಗಿದನು.

### ೧೨

ಅಸ್ತಿ ಮತ್ತು ಪ್ರಾಸ್ತಿ ಎಂಬವರು ಜರಾಸಂಧನ ಪುತ್ರಿಯರು. ಇವರನ್ನು ಕಂಸನು ಮದುವೆಯಾಗಿದ್ದನು. ಶ್ರೀಕೃಷ್ಣನು ಕಂಸನನ್ನು ವಧಿಸಿದ ಮೇಲೆ ಅಸ್ತಿ, ಪ್ರಾಸ್ತಿಯರು ತಮ್ಮ ತಂದೆಯಾದ ಜರಾಸಂಧನಲ್ಲಿಗೇ ಹೋಗಿ ಇರತೊಡಗಿದರು. ತಮ್ಮ ಪತಿ ಕಂಸನು ಕೃಷ್ಣನಿಂದ ಹತನಾದನೆಂದೂ ತಾವು ವಿಧವೆಯರಾದರೆಂದೂ ಅವರು ಗೋಳಿಡುತ್ತಿದ್ದರು. ಅಳಿಯನ ಸಾವು ಮತ್ತು ಮಕ್ಕಳ ವೈಧವ್ಯದಿಂದ ಮಗಧದ ದೊರೆಯಾದ ಜರಾಸಂಧನಿಗೆ ಅತಿ ದುಃಖವಾಯಿತು. ಹಾಗೇ ಕೋಪೋದ್ರಿಕ್ತನೂ ಆದನು. ಭೂಮಿಯ ಮೇಲೆ ಯಾದವರೇ ಇಲ್ಲದಂತೆ ಮಾಡುವುದಾಗಿ ಪ್ರತಿಜ್ಞೆ ಕೈಗೊಂಡನು. ಇಪ್ಪತ್ತಮೂರು ಅಕ್ಷೌಹಿಣಿ ಸೈನ್ಯವನ್ನು ಕಟ್ಟಿಕೊಂಡು ಮಥುರೆಗೆ ಬಂದು ಸುತ್ತಲೂ ಮುತ್ತಿಗೆ ಹಾಕಿ ನಿಂತನು.

ಆಗ ಶ್ರೀಕೃಷ್ಣನು ಹೀಗೆ ಯೋಚಿಸಿದನು, ''ಈ ದುಷ್ಟನು ಇಪ್ಪತ್ತಮೂರು ಅಕ್ಷೌಹಿಣಿ ಸೇನೆಯನ್ನು ತಂದಿರುವನು. ಅದನ್ನೀಗಲೇ ನಾಶಪಡಿಸುವೆನು. ಆದರೆ ಮಾಗಧ (ಜರಾಸಂಧ)ನನ್ನು ಈಗಲೇ ಕೊಲ್ಲುವುದಿಲ್ಲ. ಅವನು ಬದುಕಿ ಉಳಿಯಬೇಕು. ಹಾಗೆ ಉಳಿದರೆ ಬೇರೆ ಅಸುರನನ್ನು ಕರೆದುಕೊಂಡು ಮತ್ತೆ ಯುದ್ಧಕ್ಕೆ ಬರುವನು. ಆಗ ಅವರನ್ನು ಸಂಹರಿಸಬಹುದು. ನನ್ನ ಅವತಾರದ ಉದ್ದೇಶವೇ ದುಷ್ಟ ಸಂಹಾರ ಮತ್ತು ಶಿಷ್ಟ ರಕ್ಷಣೆ ಅಲ್ಲವೇ?''

ಭಗವಂತನು ಹೀಗೆ ಯೋಚಿಸುತ್ತಿರುವಾಗ ಆಕಾಶದಿಂದ ಸೂರ್ಯನಂತೆ ಹೊಳೆಯುವ ಎರಡು ದಿವ್ಯರಥಗಳು ಅವನ ಮುಂದೆ ಇಳಿದು ಬಂದವು. ಅವಕ್ಕೆ ಸಾರಥಿಗಳೂ ಇದ್ದರು. ಅವುಗಳಲ್ಲಿ ಶಸ್ತ್ರಾಸ್ತ್ರಗಳೂ ಇದ್ದವು. ಅಲ್ಲದೆ ಶ್ರೀಹರಿಯ ಆಯುಧಗಳೂ ಅಲ್ಲಿಗೆ ಬಂದವು. ಅವುಗಳನ್ನು ನೋಡಿ ಶ್ರೀಕೃಷ್ಣನು ಸಂಕರ್ಷಣ (ಬಲರಾಮ)ನಿಗೆ ಹೀಗೆಂದನು, ''ಅಣ್ಣ, ಈಗ ಯಾದವರಿಗೆ ಕಷ್ಟ ಪ್ರಾಪ್ತವಾಗಿದೆ. ನಿನಗಾಗಿ ಈ ರಥ ಮತ್ತು ನಿನ್ನ ಪ್ರೀತಿಯ ಆಯುಧಗಳೂ ಸಜ್ಜಾಗಿ ಬಂದಿವೆ. ಈ ರಥವನ್ನೇರಿ ನೀನು ಶತ್ರುಗಳ ಸಂಹಾರ ಮಾಡು. ಇದಕ್ಕಾಗಿಯೇ ಅಲ್ಲವೇ ನಾವಿಬ್ಬರು ಅವತಾರ ತಾಳಿರುವುದು? ಈಗ ಇಪ್ಪತ್ತಮೂರು ಅಕ್ಷೌಹಿಣಿಸೇನೆ ಬಂದಿದೆ. ಇದನ್ನು ನಾಶ ಮಾಡಿದರೆ ಎಷ್ಟೋ ಭೂಭಾರ ಇಳಿಯುತ್ತದೆ.'' ಹೀಗೆ ಹೇಳಿ ಕೃಷ್ಣನೂ, ಬಲರಾಮನೂ ಸನ್ನದ್ಧರಾಗಿ ಸಣ್ಣ ಸೈನ್ಯದೊಂದಿಗೆ ಮಥುರೆಯ ಹೊರಕೋಟೆಯಿಂದ ಹೊರಗೆ ಹೋದರು. ಶ್ರೀಕೃಷ್ಣನು ಪಾಂಚಜನ್ಯ ಶಂಖವನ್ನೂದಿದನು. ಆ ಧ್ವನಿಯನ್ನು ಕೇಳಿ ಶತ್ರು ಸೈನಿಕರ ಎದೆ ಒಡೆಯಿತು. ಆಗ ಜರಾಸಂಧನು ಕೃಷ್ಣನ ಮುಂದೆ ಬಂದು ಹೇಳಿದನು, ''ನರಾಧಮ ಕೃಷ್ಣ, ನಿನ್ನಂತಹ ಬಾಲಕನ ಜೊತೆ ಯುದ್ಧ ಮಾಡಲು ನನಗೆ ನಾಚಿಕೆಯಾಗುತ್ತದೆ. ಅಲ್ಲದೆ ನೀನು ಬಂಧು ಹತ್ಯೆ ಮಾಡಿದ ಪಾಪಿ. ರಾಮ, ನಿನಗೆ ಧೈರ್ಯವಿದ್ದರೆ ಯುದ್ಧ ಮಾಡು. ಒಂದೋ ನನ್ನ ಕೈಯಲ್ಲಿ ನೀನು ಸಾಯಬೇಕು ಅಥವಾ ನಿನ್ನಿಂದ ನಾನು ಹತನಾಗಬೇಕು.'' ಆಗ ಭಗವಂತನೆಂದನು ''ವೀರರು ಸುಮ್ಮನೆ ಕೊಚ್ಚಿಕೊಳ್ಳುವುದಿಲ್ಲ, ಪೌರುಷ ಮೆರೆಯುತ್ತಾರೆ. ರೋಗದಿಂದ ಸಾಯಲು ಸಿದ್ಧನಾದವನಂತೆ ನೀನು ಬಡಬಡಿಸಿದ್ದನ್ನು ನಾವು ಗಂಭೀರವಾಗಿ ಪರಿಗಣಿಸುವುದಿಲ್ಲ''

(ಮುಂದುವರಿಯುವುದು)

(ಕಳೆದ ಸಂಚಿಕೆಯ ಕೃಷ್ಣಾಯನದಲ್ಲಿ ಕೃಷ್ಣನ ಮಿತ್ರನಾದ ಉದ್ಧವನ ಹೆಸರು ತಪ್ಪಾಗಿ ಉದ್ಭವ ಎಂದು ಮುದ್ರಿತವಾಗಿದ್ದು ಸರಿಪಡಿಸಿಕೊಂಡು ಓದಬೇಕಾಗಿ ವಿನಂತಿ.)

## ಹೊಸ ಬೆಳಕು

**ನಲ್ನುಡಿ :**

**ದುರ್ಜನಃ ಸಜ್ಜನೋ ಭೂಯಾತ್**
**ಸಜ್ಜನಃ ಶಾಂತಿಮಾಪ್ನುಯಾತ್ ।**
**ಶಾಂತೋ ಮುಚ್ಯೇತ ಬಂಧೇಭ್ಯೋ**
**ಮುಕ್ತಶ್ಚಾನ್ಯಾನ್ ವಿಮೋಚಯೇತ್ ॥**

ಅಂದರೆ ದುರ್ಜನರು ಸಜ್ಜನರಾಗಲಿ; ಸಜ್ಜನರು ಶಾಂತಿಯನ್ನು ಹೊಂದಲಿ; ಶಾಂತರಾದವರು ಬಂಧನಗಳಿಂದ ಪಾರಾಗಿ ಮುಕ್ತರಾಗಲಿ; ಮುಕ್ತರಾದವರು ಇತರರ ಬಂಧ ವಿಮೋಚನೆಗೆ ನೆರವಾಗಲಿ.

**ಪುಸ್ತಕ ಪರಿಚಯ :**

**ಋಗ್ವೇದೀಯ ಸಂಕ್ಷಿಪ್ತ ಸಂಧ್ಯಾವಂದನೆ ಮತ್ತು ''ದೇವರ ಪೂಜೆ''**

*ಲೇಖಕರು :* ಶ್ರೀ ಕೆ. ಆತ್ಮಾರಾಮ ಶಾಸ್ತ್ರಿ ಬೆಂಗಳೂರು

*ಮುದ್ರಣ :* ರಾಜೇಶ್ ಪವರ್ ಪ್ರೆಸ್, ದರ್ಬೆ, ಪುತ್ತೂರು

*ಪ್ರಕಾಶನ :* ಶ್ರೀ ಶಾರದಾರಾಮ ಸೇವಾ ಪ್ರತಿಷ್ಠಾನ, ಅಜ್ಜಾವರ, ಸುಳ್ಯ.

ಋಗ್ವೇದೀಯ ಸಂಕ್ಷಿಪ್ತ ಸಂಧ್ಯಾವಂದನೆ ಮತ್ತು ದೇವರ ಪೂಜೆ ಎಂಬ ಪುಸ್ತಕದ ಮೂಲೋದ್ದೇಶಗಳನ್ನು ಪ್ರಕಾಶಕರ ಅರಿಕೆಯಲ್ಲಿ ವಿಷದೀಕರಿಸಲಾಗಿದೆ. ಮೇಧಾವಿಗಳಾದ ವಾಚಸ್ಪತಿ ಶ್ರೀ ಆತ್ಮಾರಾಮ ಶಾಸ್ತ್ರಿಯವರ ವಿವಿಧ ಕೃತಿ-ಲೇಖನಗಳು ಹಾಗೂ ಈ ಪುಸ್ತಕದ ಕೊಡುಗೆ ಬ್ರಾಹ್ಮಣ ಸಮಾಜಕ್ಕೆ ಹಿರಿಮೆ ತರುವಂತದ್ದಾಗಿದೆ. ಈ ಎರಡನೇ ಆವೃತ್ತಿಯಲ್ಲಿ ಉಪನೀತರಿಗೆ ''ಅಗ್ನಿಕಾರ್ಯ''ದ ಕ್ರಮಗಳನ್ನೂ ತಿಳಿಸಿದ್ದಾರೆ. ಶ್ರೀ ಶಾರದಾರಾಮ ಸೇವಾ ಪ್ರತಿಷ್ಠಾನದವರು ನಡೆಸುತ್ತಿರುವ ಶ್ರೀ ಶಂಕರ ಭಾರತೀ ಪಾಠಶಾಲೆ ಹಾಗೂ ಅವರ ವಿವಿಧ ಗ್ರಂಥ ಪ್ರಕಟಣೆಗಳ ಉಪಯೋಗವನ್ನು ಸಮಾಜ ಬಾಂಧವರು ಪ್ರೋತ್ಸಾಹಿಸಿದಲ್ಲಿ, ನಮ್ಮ ಸಂಸ್ಕೃತಿ ಬೆಳಗುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಈ ಕೃತಿಯ ''ಬೆನ್ನುಡಿ''ಯಲ್ಲಿ ಕೋಲ್ಪೆ ಗೋಪಾಲಕೃಷ್ಣ ರಾವ್ ತಿಳಿಸುತ್ತಾರೆ.

ಲೌಕಿಕ ವ್ಯವಹಾರಗಳಲ್ಲಿ ಸಂಪೂರ್ಣವಾಗಿ ಮುಳುಗಿ, ಆಧ್ಯಾತ್ಮಿಕ ವಿಚಾರಗಳ ಕಡೆಗೆ ಗಮನಹರಿಸಲು ಸಮಯಾಭಾವವಿರುವ ಬ್ರಾಹ್ಮಣ ಬಂಧುಗಳನ್ನೇ ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕವನ್ನು ರಚಿಸಲಾಗಿದೆ. ಕೊನೆಯ ಪಕ್ಷ ಬೆಳಗ್ಗೆ ಅರ್ಧ ಗಂಟೆ, ಸಾಯಂಕಾಲ ಕಾಲು ಗಂಟೆಯಷ್ಟು ವಿನಿಯೋಗಿಸಬಲ್ಲವರಿಗೆ ಇದು ಸಹಾಯಕವಾಗಿದೆ.

ಗಾಯತ್ರಿ ಬ್ರಾಹ್ಮಣನ ತಾಯಿ. ಬ್ರಾಹ್ಮಣ ಈ ತಾಯಿಗೆ ತನ್ನ ಮನೆಯಲ್ಲಿ ನೆಲೆಸಲು ಇಂಬುಗೊಡದಿದ್ದರೆ ಅವಳೆಲ್ಲಿರಬೇಕು? ಯಾವ ಬ್ರಾಹ್ಮಣನ ಮನೆಯಲ್ಲಿ ಗಾಯತ್ರಿಯ ಪ್ರತಿಷ್ಠೆಯಾಗಿಲ್ಲವೋ ಅದು ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಕುಲಗೆಡುತ್ತದೆ. ಗಾಯತ್ರಿಯ ಅನುಗ್ರಹ ಪಡೆಯದ ಬ್ರಾಹ್ಮಣ ಬ್ರಾಹ್ಮಣನೆನಿಸುವುದಿಲ್ಲ. ಅವನ ಮನೆ ಭೂತ, ಪಿಶಾಚ, ಬ್ರಹ್ಮರಾಕ್ಷಸರ ಆವಾಸಸ್ಥಾನವಾಗುತ್ತದೆ. ಭೂತ ಮದ್ಯಪಾನಕ್ಕೂ, ಪಿಶಾಚ ಮಾಂಸಭಕ್ಷಣೆಗೂ, ಬ್ರಹ್ಮರಾಕ್ಷಸ ದುರಾಸೆಗೂ ಬ್ರಾಹ್ಮಣನನ್ನು ಪ್ರೇರೇಪಿಸುತ್ತವೆ. ಆದ್ದರಿಂದ ಬ್ರಾಹ್ಮಣನ ಮನೆಯಲ್ಲಿ ದೈವಸಾನ್ನಿಧ್ಯವಿರಬೇಕಾದರೆ ಗಾಯತ್ರಿಯ ಉಪಾಸನೆ ಅನಿವಾರ್ಯ ಎಂಬುದು ಈ ಕೃತಿಯ ಪ್ರಕಾಶಕರ ''ಅರಿಕೆ''ಯಾಗಿದೆ.

ಈ ಪುಸ್ತಕವನ್ನು ಪ್ರಾಯೋಜಿಸಿದವರು ಶ್ರೀಯುತ ಕೋಲ್ಪೆ ಗೋಪಾಲಕೃಷ್ಣರಾಯರು.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್.

# ಮೂಡುಬಿದರೆ ಸ್ಥಾನಿಕ ಬ್ರಾಹ್ಮಣ ಸೇವಾ ಸಮಾಜ 20ನೇ ವಾರ್ಷಿಕೋತ್ಸವ

ಮೂಡುಬಿದಿರೆ ಸ್ಥಾನಿಕ ಬ್ರಾಹ್ಮಣ ಸೇವಾ ಸಮಾಜವು ನೂತನವಾಗಿ ಶ್ರೀ ಆದಿಶಂಕರ ಬ್ರಾಹ್ಮಣ ಪರಿಷತ್ತು ಎಂದು ನಾಮಕರಣಗೊಂಡು 20ನೇ ವರ್ಷದ ವಾರ್ಷಿಕೋತವವನ್ನು ಅದ್ದೂರಿಯಾಗಿ ನಡೆಸುತ್ತಿರುವುದು ಬಹಳ ಸಂತೋಷಕರ. ಇದೇ ಸಂದರ್ಭದಲ್ಲಿ ಧರ್ಮದ ಹತ್ತು ಲಕ್ಷಣಗಳ ನ್ನಿಟ್ಟುಕೊಂಡು ಸಂಘವನ್ನು ಬೆಳೆಸಿದಲ್ಲಿ ಅಭಿವೃದ್ಧಿಗೊಳ್ಳಲು ಸಾಧ್ಯವಿದೆ. ಸ್ಥಾನಿಕ ಎಂಬುದು ಅಧಿಕಾರ-ಹುದ್ದೆಯ ನಾಮಧೇಯ. ಅದಕ್ಕಾಗಿ ನಾವು ಹೆಮ್ಮೆಪಡಬೇಕು. ಗುರು ಪರಂಪರೆಯನ್ನು ನೆನಪಿಟ್ಟುಕೊಂಡು ಮುಂದಡಿ ಇಡಬೇಕಾಗಿದೆ ಎಂದು ಸಭೆಯ ಅಧ್ಯಕ್ಷತೆ ವಹಿಸಿ ದೀಪ ಬೆಳಗಿ 20ನೇ ವರ್ಷದ ವಾರ್ಷಿಕೋತವವನ್ನು ಉದ್ಘಾಟಿಸಿದ ಕೋಟೆಕಾರು ಶ್ರೀ ಶಂಕರ ಮಠದ ಧರ್ಮಾಧಿಕಾರಿ ಶ್ರೀ ಸತ್ಯಶಂಕರ ಬೊಳ್ಳಾವ ಅವರು ನುಡಿದರು.

ಕಾರ್ಯಕ್ರಮದ ಬಗೆಗೆ ಶುಭಾಶಂಸನೆಗೈದ ಶ್ರೀ ಪಾವಂಜೆ ಜಗದೀಶ ಉಪಾಧ್ಯರು ಮಾತನಾಡಿ ಭಾರತೀಯ ಸಂಸ್ಕೃತಿಯನ್ನು ಎಲ್ಲರೂ ಪಾಲಿಸಬೇಕು. ಸಂಘದಿಂದ ಒಗ್ಗೂಡುವಿಕೆ ಸಾಧ್ಯವಾಗಿ ಶಕ್ತಿ ಬಲವತರವಾಗುವುದೆಂದು ತಿಳಿಸಿದರು. ಇದೇ ಸಂದರ್ಭದಲ್ಲಿ 20 ವರ್ಷ ಕಾಲ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಶ್ರೀ ಲ| ಬೆಟ್ಕೇರಿ ನಾರಾಯಣ ರಾವ್, ಸಮಾಜದ ಹಿರಿಯರಾದ ಶ್ರೀಮತಿ ಬೊಕ್ಕಸ ತಂಗಮ್ಮ ಪರವಾಗಿ ಹಿರಿಯ ಪುತ್ರ ಮೋಹನರಾವ್ ಹಾಗೂ ಸಂಘದ ರಚನೆಗೆ ಕಾರಣಕರ್ತರಾಗಿ ದುಡಿದ ಸಂಚಾಲಕ ಶ್ರೀ ರಾಯೀ ರಾಜಕುಮಾರರನ್ನು ಸನ್ಮಾನಿಸಲಾಯಿತು. ಸನ್ಮಾನಿತರ ಪರವಾಗಿ ಶ್ರೀ ನಾರಾಯಣ ರಾವ್ ಕೃತಜ್ಞತೆ ಸಲ್ಲಿಸಿದರು. ವಿಶೇಷ ಅಭ್ಯಾಗತರುಗಳಾದ ಕರ್ಣಾಟಕ ಬೇಂಕಿನ ಸಹಾಯಕ ಜನರಲ್ ಮೆನೇಜರ್ ಶ್ರೀ ಚಂದ್ರಶೇಖರ ರಾವ್, ಕಾರ್ಕಳ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಎ. ರಾಮಮೋಹನ ರಾವ್, ಪಡುಬಿದಿರೆ ಸಭಾದ ಅಧ್ಯಕ್ಷ ಶ್ರೀ ಎಂ.ಕೆ. ಮೋಹನರಾವ್ ಶುಭ ಹಾರೈಸಿದರು. ಶ್ರೀಮತಿ ಕವಿತಾ ಹಾಗೂ ಪುತ್ತಿಗೆ ಶ್ರೀನಿವಾಸ ರಾವ್ ಸನ್ಮಾನಿತರ ಪರಿಚಯ ಗೈದರು.

ಶ್ರೀಮತಿ ಸುಮಾ ಪ್ರಾರ್ಥಿಸಿ ಸಾಂಸ್ಕೃತಿಕ ಕಾರ್ಯಕ್ರಮ ನಿರ್ವಹಿಸಿದರು. ಪರಿಷತ್ತಿನ ಅಧ್ಯಕ್ಷ ಶ್ರೀ ಬೆಳುವಾಯಿ ದೇವಾನಂದ ಭಟ್ ಸ್ವಾಗತಿಸಿ ಅತಿಥಿಗಳ ಪರಿಚಯ ಗೈದು ಪ್ರಾಸಾವಿಕವಾಗಿ ಮಾತನಾಡಿದರು. ಸಾಂಸ್ಕೃತಿಕ ಕಾರ್ಯಕ್ರಮ ನಿರ್ವಹಿಸಿ ಕಾರ್ಯಕ್ರಮ ಸಂಯೋಜನೆಗೆ ಸಹಕರಿಸಿದ ಅಲಂಗಾರು ಜಯರಾಮ ರಾವ್ ಹಾಗೂ ಜಗದೀಶ ರಾವ್ ಮತ್ತು ಸರ್ವ ವಿಧದಲ್ಲೂ ಸಹಕರಿಸಿದ ಅಲಂಗಾರು ಭಾಸ್ಕರ ರಾವ್ ಹಾಗೂ ಉಪಾಧ್ಯಕ್ಷೆ ಶಶಿಕಲಾ ರಾವ್‌ರನ್ನು ಗೌರವಿಸಲಾಯಿತು. ಸಂಚಾಲಕ ರಾಯೀ ರಾಜಕುಮಾರ್‌ರು ಸಭಾ ಕಾರ್ಯಕ್ರಮ ನಿರ್ವಹಿಸಿ ಸಂಘದ 20 ವರ್ಷದ ಬೆಳವಣಿಗೆಯ ವರದಿ ಮಂಡಿಸಿದರು. ಪರಿಷತ್ತಿನ ಕಾರ್ಯದರ್ಶಿ ಕಬ್ಬಿನಾಲೆ ರಾಘವೇಂದ್ರ ಹೆಬ್ಬಾರರು ವಂದಿಸಿದರು. ದ.ಕ. ಹಾಗೂ ಉಡುಪಿ ಜಿಲ್ಲೆಗಳ ವಿವಿಧ ಸ್ಥಾನಿಕ ಸಂಘದ ಪದಾಧಿಕಾರಿಗಳು ಹಾಜರಿದ್ದರು. ಸಭಾ ಕಾರ್ಯಕ್ರಮದ ತರುವಾಯ ಮೂಡುಬಿದಿರೆಯ ಒಟ್ಟು 23 ಕುಟುಂಬದ ಸ್ಥಾನಿಕ ಬಂಧುಗಳು ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸ್ತುತ ಪಡಿಸಿ ಮನೋರಂಜನೆಯನ್ನು ನೀಡಿದರು.

ವರದಿ : **ರಾಯೀ ರಾಜಕುಮಾರ್ ಮೂಡುಬಿದಿರೆ**

## ಅನಿಸಿಕೆ

‘ಶಾರದಾ’ ಮಾಸಪತ್ರಿಕೆಯನ್ನು ಕಳೆದ ಕೆಲವು ವರ್ಷಗಳಿಂದ ನನಗೆ ಕಳುಹಿಸುತ್ತಿದ್ದೀರಿ. ಪತ್ರಿಕೆ ತುಂಬ ಅರ್ಥಪೂರ್ಣವಾಗಿ ಮೂಡಿಬರುತ್ತಿದೆ. ಒಂದು ಬ್ರಾಹ್ಮಣ ಸಂಘದ ಪತ್ರಿಕೆ ಹೇಗಿರಬೇಕು ಎಂಬುದಕ್ಕೆ ಇದು ಮಾದರಿಯಾಗಿದೆ. ಸಂಪಾದಕ ಮಂಡಳಿಯವರಿಗೆ ಮತ್ತು ಸಹಕರಿಸುತ್ತಿರುವ ಎಲ್ಲ ವಿಪ್ರಬಾಂಧವರಿಗೆ ನನ್ನ ಅಭಿನಂದನೆಗಳು.

**- ಡಾ| ಎಚ್.ವಿ.ನರಸಿಂಹಮೂರ್ತಿ, ವಿಶ್ರಾಂತ ಪ್ರಾಧ್ಯಾಪಕರು, ಕುಂದಾಪುರ ಹಾಗೂ ಶ್ರೀಶೃಂಗೇರಿ ಜಗದ್ಗುರು ಮಹಾಸಂಸ್ಥಾನದ ಪ್ರಾಂತೀಯ ಧರ್ಮಾಧಿಕಾರಿಗಳು**

# ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾದ ಮಹಿಳಾ ಘಟಕ, ಮೈಸೂರು : ಕಾರ್ಯಕ್ರಮ

ಮೈಸೂರಿನ ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾದ ಮಹಿಳಾ ಸಂಘದ ಕಾರ್ಯಕ್ರಮವು ತಾ.13-02-2011 ರಂದು ಮಹಿಳಾ ಸಂಘದ ಮಾಜಿ ಅಧ್ಯಕ್ಷೆಯಾದ ದಿ| ಶ್ರೀಮತಿ ಅಮೃತಕಲಾ ರವರ ಪುತ್ರ ಶ್ರೀ ಆನಂದ ಹಾಗೂ ಪ್ರಶಾಂತಿ ದಂಪತಿಗಳ ಮನೆಯಲ್ಲಿ ನೆರವೇರಿತು. ಮಾಜಿ ಅಧ್ಯಕ್ಷೆ ಅಮೃತಕಲಾ ರವರು ಇತ್ತೀಚೆಗೆ ದೈವಾಧೀನರಾದರು. ಅವರು ಬದುಕಿರುವಾಗ ನಮ್ಮ ಸಮಾಜಕ್ಕೋಸ್ಕರ ತುಂಬಾ ಉತ್ಸುಕರಾಗಿ ಕಾರ್ಯಶೀಲರಾಗಿ, ಕ್ರಿಯಾತ್ಮಕವಾಗಿ ಸೇವೆ ಸಲ್ಲಿಸಿದ್ದರು. ಕಾರ್ಯಕ್ರಮ ಆರಂಭವಾಗುವ ಮೊದಲು ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಸದಸ್ಯರೆಲ್ಲರೂ ಮೌನ ಆಚರಣೆಯೊಂದಿಗೆ ಪ್ರಾರ್ಥಿಸಿದರು. ಕಾರ್ಯಕ್ರಮದಲ್ಲಿ ಮಹಿಳೆಯರು ಹಾಗೂ ಮಹನೀಯರು ಸುಮಾರು 60 ಮಂದಿ ಭಾಗವಹಿಸಿದರು. ಮಹಿಳಾ ಸಂಘದ ಸದಸ್ಯರೆಲ್ಲರೂ ಸಾಮೂಹಿಕವಾಗಿ ಪ್ರಾರ್ಥನೆಯನ್ನು ಹಾಡಿದರು. ಮಹಿಳಾ ಸಂಘದ ಅಧ್ಯಕ್ಷರಿಂದ ಸ್ವಾಗತ ಭಾಷಣದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಸಭೆಯ ಕಾರ್ಯಕ್ರಮದಲ್ಲಿ ಮೊದಲನೆಯದಾಗಿ ಶ್ರೀಮತಿ ಸೀತಾರತ್ನ ಶಿವಶಂಕರ್‌ರವರು ಯೋಗ ಮುದ್ರೆಯಲ್ಲಿ ಮುಖ್ಯವಾಗಿ ಜ್ಞಾನಮುದ್ರೆ, ಪೃಥ್ವಿ ಮುದ್ರೆ, ಅಪಾನಮುದ್ರೆ, ಪ್ರಾಣಮುದ್ರೆ, ಧ್ಯಾನಮುದ್ರೆ, ವಾಯುಮುದ್ರೆ, ಆಕಾಶಮುದ್ರೆ, ವರುಣ ಮುದ್ರೆ, ವ್ಯಾನಮುದ್ರೆ ಹಾಗೂ ಚಿಕಿತ್ಸೆ ಮುದ್ರೆ ಇತ್ಯಾದಿಗಳನ್ನು ಕೃತಿಯಲ್ಲಿ ತೋರಿಸಿ ಪ್ರತಿಯೊಂದು ಮುದ್ರೆಯಲ್ಲಿಯೂ ಅಡಗಿರುವ ಬೇರೆ ಬೇರೆ ರೀತಿಯ ಖಾಯಿಲೆ ನಿವಾರಣೆಯನ್ನು ವಿವರಿಸಿದರು. ಇದರಿಂದ ದೈನಂದಿನ ಜೀವನದಲ್ಲಿ ಯೋಗಮುದ್ರೆಯ ಪ್ರಾಮುಖ್ಯತೆಯನ್ನು ಸದಸ್ಯರೆಲ್ಲರೂ ಅರಿತುಕೊಂಡು ಅದರ ಸದುಪಯೋಗವನ್ನು ಪಡೆದುಕೊಳ್ಳಲು ನಿರ್ಧರಿಸಿದರು. ನಂತರ ಶ್ರೀಮತಿ ಪ್ರಶಾಂತಿ ಆನಂದರವರು ಬಿಸ್ಕೆಟ್ ತಿನ್ನುವ ಆಟ, ಪ್ಲೇಕಾರ್ಡ್ಸ್ ಮತ್ತು ಹೌಸಿ-ಹೌಸಿ ಆಟಗಳನ್ನು ಆಡಿಸಿ ಎಲ್ಲರ ಮನಸ್ಸನ್ನು ರಂಜಿಸಿದರು. ಇದರಲ್ಲಿ ಜಯಶೀಲರಾದ ಮಹಿಳೆಯರಿಗೆ ಬಹುಮಾನವನ್ನಿತ್ತು ಸತ್ಕರಿಸಿದರು. ಸಂಘದ ಹೆಚ್ಚಿನ ಸದಸ್ಯರು ಬಂದು ಸಹಕರಿಸಿದ್ದರಿಂದ ಮಹಿಳಾ ವಿಭಾಗದ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಶ್ರೀ ಆನಂದ ಹಾಗೂ ಪ್ರಶಾಂತಿ ದಂಪತಿಗಳು ಸ್ವಾದಿಷ್ಟವಾದ ಭೋಜನವನ್ನು ನೀಡಿ ಸತ್ಕರಿಸಿದರು. ಮಹಿಳಾ ಸಂಘದ ಅಧ್ಯಕ್ಷ ರಿಂದ ಧನ್ಯವಾದ ಅರ್ಪಣೆಯೊಂದಿಗೆ ಅಂದಿನ ಕಾರ್ಯಕ್ರಮ ಮುಕ್ತಾಯವಾಯಿತು.

ವರದಿ : **ರಮಾವಾಣಿ ಟಿ.ಸಿ.ರಾವ್**

# ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ನಿ.), ಉಡುಪಿ ಇದರ ಚುನಾವಣಾ ಫಲಿತಾಂಶ

**ತಾ.11-03-2011ರಂದು ಶುಕ್ರವಾರ ನಡೆದ 2011-12ರಿಂದ 2015-16ನೇ 5 ಸಹಕಾರಿ ವರ್ಷಗಳಿಗೆ ನಡೆದ ಚುನಾವಣೆಯಲ್ಲಿ ಆಡಳಿತ ಮಂಡಳಿಗೆ ಈ ಕೆಳಗಿನವರು ನಿರ್ದೇಶಕರಾಗಿ ಚುನಾಯಿತರಾಗಿದ್ದಾರೆ.**

**1. ಯು.ಅರವಿಂದ ಕುಮಾರ, ಮಣಿಪಾಲ**
**2. ಪ್ರಕಾಶ ಕುಮಾರ ವೈ, ಉಡುಪಿ**
**3. ಪ್ರಫುಲ್ಲ ಚಂದ್ರ, ಯು., ಉಡುಪಿ**
**4. ಮಂಜುನಾಥ ಹೆಬ್ಬಾರ್ ಕೆ., ಉಡುಪಿ**
**5. ಮುರಳೀಕೃಷ್ಣ ರಾವ್ ವೈ, ಇಂದ್ರಾಳಿ**
**6. ವೇಣುಗೋಪಾಲ ರಾವ್ ಕೆ., ಅಂಬಲಪಾಡಿ**
**7. ಸದಾನಂದ ರಾವ್ ಎಮ್, ಚಿಟ್ಪಾಡಿ**

**ಇವರಲ್ಲದೆ ಶ್ರೀಮತಿ ಗೀತಾ ಕೃಷ್ಣ ಕುಮಾರ್ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ**


Turning dreams into reality




A home of your own won't be a dream any longer. SyndicateBank makes owning your home pleasant and hassle free with SyndNivas. SyndicateBank will take care of your needs with easy and affordable repayment terms

विश्वसनीय. मैत्रीपूर्ण
Faithful. Friendly
सिंडिकेटबैंक
SyndicateBank
भारत सरकार का उपक्रम A GOVT. OF INDIA UNDERTAKING
www.syndicatebank.in

# ಸುಬ್ರಹ್ಮಣ್ಯ ಸಭಾ (ರಿ.), ಬಿಜೈ ರಸ್ತೆ ಮಂಗಳೂರು : ಕಿರುಪ್ರವಾಸ



ಶ್ರೀ ಕಾಂತೇಶ್ವರ ಸ್ವಾಮಿ ದೇವಸ್ಥಾನ, ಶ್ರೀ ಕ್ಷೇತ್ರ ಕಾಂತಾವರ. ರೇಖಾಚಿತ್ರ : ರಘುವೀರ, ಪೆರ್ಡೂರು

ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ ಕಿರು ಪ್ರವಾಸವು ತಾ.27-02-2011ರ ರವಿವಾರದಂದು ಶ್ರೀ ಅನ್ನಪೂರ್ಣೇಶ್ವರಿ ಕ್ಷೇತ್ರ, ಹೊಸನಾಡು ಕೊಡ್ಯಡ್ಕ ಹಾಗೂ ಶ್ರೀ ಕಾಂತೇಶ್ವರ ಕ್ಷೇತ್ರ, ಕಾಂತಾವರಕ್ಕೆ ಏರ್ಪಡಿಸಲಾಗಿತ್ತು. ಬೆಳಿಗ್ಗೆ 7-30ಕ್ಕೆ ಸದನದಿಂದ ಹೊರಟ ಬಸ್ಸು ಸದಸ್ಯರ ಭಜನೆಯೊಂದಿಗೆ ಪೊಳಲಿಯಲ್ಲಿರುವ ಸಭಾದ ನೂತನ ನಿವೇಶನಕ್ಕೆ ತಲುಪಿತು. ಸಮಾಜ ಬಾಂಧವರು ಸದನದಲ್ಲಿ ತಯಾರಿಸಿ ತಂದ ಮೂಡೆ, ಚಟ್ನಿ, ಸಾಂಬಾರ್, ಶೀರಾ ಹಾಗೂ ಚಾ ಕಾಫಿಯನ್ನು ಸವಿದು ನಿವೇಶನದ ಉದ್ದಗಲಕ್ಕೂ ಸುತ್ತಾಡಿದರು. ಅಲ್ಲಿಂದ ಮುಂದೆ ಶ್ರೀ ರಾಜರಾಜೇಶ್ವರಿ ಅಮ್ಮನವರ ದರ್ಶನವನ್ನು ಮುಗಿಸಿದ ತಂಡವು ಕೊಡ್ಯಡ್ಕದತ್ತ ಪ್ರಯಾಣ ಬೆಳೆಸಿತು. ಸಮಯ ಕಳೆಯಲು ಪ್ರಾರಂಭಿಸಿದ ಪದ್ಯಬಂಡಿ (ಅಂತ್ಯಾಕ್ಷರಿ)ಯ ಮಹಿಳೆಯರ ತಂಡ, ಪುರುಷರ ತಂಡವಾಗಿ ಸ್ಪರ್ಧೆ ಏರ್ಪಟ್ಟು ಜಿದ್ದಾಜಿದ್ದಿನ ಸ್ಪರ್ಧೆ ನಡೆದು ಕೊಡ್ಯಡ್ಕ ದೇವಸ್ಥಾನ ಸಮೀಪಿಸಿದ್ದು ಯಾರ ಗಮನಕ್ಕೂ ಬರಲಿಲ್ಲ.

ಕೊಡ್ಯಡ್ಕ ದೇವಸ್ಥಾನದಲ್ಲಿ ನಮ್ಮನ್ನು ಸ್ವಾಗತಿಸಿದ್ದು ಆಂಜನೇಯನ ಬೃಹತ್ ಮೂರ್ತಿ. ಇದರ ಸೌಂದರ್ಯಕ್ಕೆ ಮನಸೋತ ಹಲವರು ಫೋಟೋ ಕ್ಲಿಕ್ಕಿಸತೊಡಗಿದರು. ನಂತರ ಎದುರಾದದ್ದು ಸರ್ವರಿಗೆ ಪ್ರಿಯವಾದ ಲಕ್ಷ್ಮೀ (ಆನೆ), ರಾಣಿ (ಒಂಟೆ), ಗಣಪ (ಹೋರಿ) ಪುಟಾಣಿಗಳು ಅವುಗಳನ್ನು ಮುಟ್ಟಿ ನೋಡಿ ಸಂತಸಗೊಂಡರೆ ಹಿರಿಯರು ಅದರ ಗುಣ, ಗಾತ್ರ ಸ್ವಭಾವಗಳ ಬಗ್ಗೆ ತಮ್ಮ ತಮ್ಮಲ್ಲೇ ಚರ್ಚಿಸ ತೊಡಗಿದರು. ಮುಂದೆ ಎದುರಾದದ್ದು ಮೊಲ, ಬಾತುಕೋಳಿ, ಗಿಣಿ ಮೊದಲಾದ ಪ್ರಾಣಿಗಳು ಮುದ್ದು ಮುದ್ದಾಗಿದ್ದು ಎಲ್ಲರನ್ನೂ ಮುದಗೊಳಿಸಿದವು.

ಸಮಾಜ ಬಾಂಧವರು ವೈಯಕ್ತಿಕವಾಗಿ ಹಲವು ವಿಧದ ಪೂಜಾ ಸೇವೆಗಳನ್ನು ಮಾಡಿಸಿದರೆ ಶ್ರೀ ಸಭಾದ ವತಿಯಿಂದ ವಿಶೇಷ ಅಕ್ಕಿ ಸೇವೆಯನ್ನು ಮಾಡಿಸಲಾಯಿತು. ಸರ್ವಾಲಂಕೃತ ದೇವಿಯ ದರುಶನಗೈದ ಸಮಾಜ ಬಾಂಧವರು ಪುಳಕಿತರಾಗಿ ದೇವಸ್ಥಾನದ ಒಳಗಿನ ಪೌಳಿಯಲ್ಲಿ ಕುಳಿತು ಶ್ಲೋಕ, ಸ್ತೋತ್ರ, ಭಜನೆಗಳನ್ನು ಹಾಡಿ ಧನ್ಯರಾದರು. ಬಹಳ ವೈಭವಯುತವಾಗಿ ನಡೆದ ಮಂಗಳಾರತಿಯನ್ನು ವೀಕ್ಷಿಸಿದ ತಂಡವು ಧನ್ಯತಾ ಭಾವವನ್ನು ಹೊಂದಿತು. ದೇವರ ಪ್ರಸಾದ ಹಾಗೂ ಅನ್ನ ಪ್ರಸಾದವನ್ನು ಪಡೆದ ನಂತರ ತಂಡವು ಶ್ರೀ ಕಾಂತಾವರ ಕ್ಷೇತ್ರದತ್ತ ಮುಂದುವರಿಯಿತು. ಶ್ರೀ ಪುತ್ತಿಗೆ ವಾದಿರಾಜ ರಾವ್‌ರವರು ಕೊಡ್ಯಡ್ಕ ದೇವಸ್ಥಾನದ ಸಂದರ್ಶನಕ್ಕೆ ಬೇಕಾದ ಸರ್ವ ವ್ಯವಸ್ಥೆಗಳನ್ನು ಮಾಡಿ ಸಹಕರಿಸಿದರು.

ಭೋಜನದ ನಂತರದ ಪ್ರಯಾಣದಲ್ಲಿ ಹಲವು ಭಾವಗೀತೆಗಳು, ಜಾನಪದ ಗೀತೆಗಳು ಹಾಡಲ್ಪಟ್ಟು ಸರ್ವರನ್ನು ರಂಜಿಸಿದವು. ಶ್ರೀ ಕಾಂತೇಶ್ವರ ದೇವಸ್ಥಾನದ ಹೊರಗಿನ ವಿಶಾಲ ಪ್ರದೇಶದಲ್ಲಿ ಮೊದಲು ಹಲವಾರು ಮನೋರಂಜನಾತ್ಮಕ ಆಟಗಳು ಆಡಲ್ಪಟ್ಟವು. ಹಿರಿಯರು, ಕಿರಿಯರು ವಯಸ್ಸಿನ ಭೇದ ಮರೆತು ಆಟಗಳಲ್ಲಿ ಪಾಲ್ಗೊಂಡು ರಂಜನೆಯನ್ನು, ಬಹುಮಾನವನ್ನು ಪಡೆದರು. ಅಲ್ಲಿಯೇ ಚಾ, ಕಾಫಿ, ಬನ್ಸ್, ಮಾಲ್‌ಪೂರಿ, ಕಾರಕಡ್ಡಿಯನ್ನು ತಿಂದು ಸಮಾಜ ಬಾಂಧವರು ದೇವಸ್ಥಾನದ ಪೌಳಿಯನ್ನು ಪ್ರವೇಶಿಸಿದರು. ನಿಸರ್ಗದ ಮಡಿಲಲ್ಲಿರುವ ಶ್ರೀ ಕಾಂತೇಶ್ವರ ದೇವರ ಸನ್ನಿಧಿಯು ಎತ್ತರವಾದ ಪ್ರದೇಶದಲ್ಲಿದ್ದು ಸುಂದರವಾದ ಪ್ರಾಕೃತಿಕ ಸೌಂದರ್ಯವನ್ನು ಹೊಂದಿದೆ. ಸುಮಾರು 2000 ವರುಷಗಳಿಗಿಂತಲೂ ಹಿಂದಿನ ಇತಿಹಾಸವಿರುವ ಶ್ರೀ ಕ್ಷೇತ್ರದಲ್ಲಿ ವಿಶೇಷವಾದ ಶಿವಲಿಂಗವು ಪೂಜಿಸಲ್ಪಡುತ್ತಿದ್ದು ದಿನದ ಮೂರು ಕಾಲಕ್ಕೆ ತಕ್ಕಂತೆ ಬಣ್ಣ ಬದಲಾವಣೆಗೆ ಒಳಪಡುತ್ತದೆ. ಪ್ರಾರ್ಥಃಕಾಲ ರಜತ ಬಣ್ಣ, ಪೂರ್ವಾಹ್ನ ಕಂಚಿನ ಬಣ್ಣ ಹಾಗೂ ರಾತ್ರಿ ಕಾಲದಲ್ಲಿ ಬಂಗಾರದ ವರ್ಣದಿಂದ ಶೋಭಿಸುತ್ತದೆ. ದೇವಸ್ಥಾನವನ್ನು ದರ್ಶಿಸಿದ ಸಮಾಜ ಬಾಂಧವರು ಭಾವುಕರಾಗಿ ಹಲವರು ಧ್ಯಾನಕ್ಕೆ ಕುಳಿತರೆ ಹಲವರು ಸ್ಥಳ ಪುರಾಣದ ಬಗ್ಗೆ ಅರ್ಚಕರ ಬಳಿ ಮಾಹಿತಿ ಪಡೆದರು. ಶ್ರೀ ರಘುವೀರ ಪೆರ್ಡೂರುರವರು ಸ್ಥಳದಲ್ಲೇ ದೇವಸ್ಥಾನದ ರೇಖಾಚಿತ್ರವನ್ನು ಬರೆದು ಸರ್ವರ ಶ್ಲಾಘನೆಗೆ ಪಾತ್ರರಾದರು.

ದೇವಸ್ಥಾನಗಳ ಸಂದರ್ಶನದಿಂದ ಧನ್ಯತಾ ಭಾವದಿಂದ ತಂಡ ಮತ್ತೆ ಮಂಗಳೂರಿಗೆ ಪ್ರಯಾಣಿಸಿತು. ಈ ಬಾರಿ ತಂಡವನ್ನು ರಂಜಿಸಿದವರು ಸದನದ ನಿವಾಸಿ ಶ್ರೀ ರಂಜನ್ ರಾವ್. ಅವರಿಗೆ ಶ್ರೀ ರಾಜರಾಮ್ ಹಾಗೂ ಶ್ರೀ ಕಾರ್ತಿಕ್ ಕುಡುಪು ಸಾಥ್ ನೀಡಿದರು. ಹಲವಾರು ಸ್ವರಚಿತ ಶಾಯರಿ, ರ್‍ಯಾಪ್ ಸಾಂಗ್‌ಗಳನ್ನು ಹಾಡಿದ ಇವರು ಸರ್ವರನ್ನೂ ತಮ್ಮ ನೃತ್ಯದ ಮೂಲಕ ರಂಜಿಸಿದರು. ಕಿರುಪ್ರವಾಸದಲ್ಲಿ ಮನೋರಂಜನೆ ಹಾಗೂ ವಿವಿಧ ಆಟಗಳನ್ನು ಶ್ರೀ ಪಿ. ಶ್ರೀಕಾಂತ ರಾವ್, ಶ್ರೀಮತಿ ಅರುಣಾ ಸೋಮಶೇಖರ್ ಹಾಗೂ ಶ್ರೀ ನಾಗರಾಜ ಶರ್ಮ ಸಂಯೋಜಿಸಿದ್ದರೆ, ಬಸ್ಸಿನ ವ್ಯವಸ್ಥೆ ಹಾಗೂ ತಿಂಡಿ ಪಾನೀಯಗಳ ವ್ಯವಸ್ಥೆಗಳನ್ನು ಶ್ರೀಯುತ ಕರುಣಾ ರಾವ್ ಬೆಳ್ಳೆ ಹಾಗೂ ಶ್ರೀ ಅನಿಲ್ ರಾವ್ ಬಿ.ಎಸ್. ನಿರ್ವಹಿಸಿದರು.

ವರದಿ : **ಪಿ. ಶ್ರೀಕಾಂತ ರಾವ್**

# ಸೇವೆ

**- ಸಾಂತೂರು ಸದಾಶಿವ ರಾವ್**

ನಿವೃತ್ತ ಇತಿಹಾಸ ಉಪನ್ಯಾಸಕ, ಯಕ್ಷಗಾನ ಅರ್ಥದಾರಿ, ಪ್ರವಚನಕಾರ

ದೇವರ ಗುರುಹಿರಿಯರ ವೃದ್ಧರ ಸೇವೆ ಇದು ಸೇವೆಯ ಒಂದು ಮುಖ. ಮಕ್ಕಳ, ರೋಗಿಗಳ, ವೃದ್ಧಾಪ್ಯದಲ್ಲಿ ದುರ್ಬಲರಾಗಿರುವವರ ಸೇವೆ ಇನ್ನೊಂದು ಮುಖ. ದೇಶ, ಸಮಾಜಗಳ ಸೇವೆ ಮೂರನೆಯ ಮುಖ. ಸೇವಾ ವೃತ್ತಿ ಅಥವಾ ಸೇವಾ ಧರ್ಮ ನಾಲ್ಕನೆಯ ಮುಖ.

ಸೇವೆಯು 'ಉಪ' ಅಂದರೆ ಸಮೀಪ ಇದ್ದು ಸಂಬಂಧಪಟ್ಟುದರ ಬಗೆಗೆ ಗಮನ ಇಟ್ಟುಕೊಂಡು ಮಾಡುವ ಕರ್ತವ್ಯ. ಇಲ್ಲಿ ಸ್ವಾರ್ಥ ಗೌಣ. ಅದು ಲಕ್ಷ್ಯವಲ್ಲ.

"ಅಭಿವಾದನ ಶೀಲಸ್ಯ ನಿತ್ಯಂ ವೃದ್ಧೋಪ ಸೇವಿನಃ ಚತ್ವಾರಃ ತಸ್ಯ ವರ್ಧಂತೇ ಆಯುರ್ವಿದ್ಯಾ ಯಶೋಬಲಂ" ಇಲ್ಲಿ ಸಿಗುವ ಲಾಭಗಳು ಎಲ್ಲರಿಗೂ ಅಪೇಕ್ಷಣೀಯವಾದವುಗಳು. ಆದರ ಅಭಿವಾದನೆಯಾಗಲೀ, ವೃದ್ಧೋಪ ಸೇವನೆಯಾಗಲೀ ಲಾಭ ದೃಷ್ಟಿಯಿಂದ ಮಾಡಬಹುದಾದುವುಗಳಲ್ಲ. ಅವು ಸಹಜ ಸ್ವಭಾವವಾಗಿ ಪ್ರೀತಿಪೂರ್ವಕವಾಗಿ ನಡೆಸಬೇಕಾದ, ನಡೆಯುವ ಪ್ರಕ್ರಿಯೆಗಳು. ಇಲ್ಲಿ ವೃದ್ಧ ಎಂದರೆ ವೃದ್ಧಿ. ಅಂದರೆ ಸಾಮಾನ್ಯಕ್ಕಿಂತ ಉನ್ನತ ಸಾಧನೆ. ಸಿದ್ಧಿಗಳನ್ನು ಪಡೆದವನು ಎಂಬ ಅರ್ಥ ಮುಖ್ಯ. ವೃತ್ತಿಯಲ್ಲಿ ಜ್ಞಾನ, ಅನುಭವಗಳ ಅಧಿಕ್ಯವು ವೃದ್ಧತ್ವದ ಲಕ್ಷಣ. ಅಂಥವರು ಎಳೆಯ ಪ್ರಾಯದವರಾದರೂ ವೃದ್ಧರೆಂದು ಪರಿಗಣಿಸಲ್ಪಡುತಾರೆ.

ದೇವರ, ಗುರುಹಿರಿಯರ ಸೇವೆ ಪರಮ ಲಾಭಕರವಾದುವುಗಳೆಂದು ಎಲ್ಲರಿಗೂ ತಿಳಿದುಕೊಳ್ಳಲು ಸಾಧ್ಯ. ಆದರೆ ಇವು ಲಾಭೈಕ ದೃಷ್ಟಿಯ ವ್ಯಾಪಾರವಾಗಿ ಇರಲು ಖಂಡಿತ ಸಾಧ್ಯವಿಲ್ಲ. ಹಾಗಿದ್ದಲ್ಲಿ ಪೂರ್ಣ ಫಲಕಾರಿಯಾಗಲಾರವು.

ಸೇವೆಗೆ ಪರ್ಯಾಯವಾಗಿ ಕೆಲವೆಡೆ ಶುಶ್ರೂಷೆ ಎಂಬ ಪದದ ಬಳಕೆಯಾಗುತ್ತದೆ. "ಶುಶ್ರೂಷಾ ಎಂದರೆ ಶ್ರೋತುಮಿಚ್ಛಾ" ಶ್ರದ್ಧೆಯಿಂದ ಕೇಳಿ ಮರೆತು ಬಿಡದೆ ಮನನ ಮಾಡಿ ಆಚರಿಸುವ ಪ್ರಯತ್ನ ಎಂದು ಅರ್ಥ.

ಗುರುಗಳ ಶುಶ್ರೂಷೆಯೇ ಸೇವೆ. ದೇವರ ಸೇವೆಯಲ್ಲಿ ಪ್ರಾರ್ಥನೆ, ಮಂತ್ರ, ಸ್ತೋತ್ರಗಳ ಹೇಳುವಿಕೆ ಇರುತದೆ. ಇದೂ ಶುಶ್ರೂಷೆಯಾಗಿ ಫಲಕಾರಿಯಾಗುತದೆ. ಯಾಂತ್ರಿಕವಾಗಿ ಮಾಡಿದರೆ ಹೆಚ್ಚಿನ ಪರಿಣಾಮ ಬೀರಲಾರದು. ಇಲ್ಲಿ ಭಕ್ತಿ ಮುಖ್ಯ. ಅದರ ಫಲ ನ ಕ್ರೋಧೋ, ನಚ ಮಾತ್ಸರ್ಯಂ, ನ ಲೋಭೋ, ನ ಅಶುಭ ಮತಿಃ। ಭವಂತಿ ಕೃತ ಪುಣ್ಯಾನಾಂ ಭಕ್ತಾನಾಂ ಪುರುಷೋತ್ತಮ ಎಂಬ ಮಾತು ಅರ್ಥ ಪೂರ್ಣ. ಹಾಗೆಯೇ "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂಬ ಮಾತೂ ಇದೇ ಭಾವವನ್ನು ಬಿಂಬಿಸುತ್ತದೆ.

ಗುರುಗಳ ಸೇವೆ ಮಾಡದವನ ವಿದ್ಯೆ ಅಪೂರ್ಣ. ಹಿರಿಯರ ಸೇವೆ ಮಾಡದವನು ಎಂದೂ ಶ್ರೇಯಸ್ಸನ್ನು ಪಡೆಯಲಾರ. **ಗುರು ಹಿರಿಯರ ಮನಸ್ಸನ್ನು ನೋಯಿಸಿದವನ ಪಾಪಕ್ಕೆ ಪ್ರಾಯಶ್ಚಿತ್ತವಿಲ್ಲವಂತೆ.** ಅವನಿಗೆ ಅಧಃಪತನವೇಗತಿ.

ಮಕ್ಕಳನ್ನು ದೇವತಾಭಾವನೆಯಿಂದ ಬೆಳೆಸುವುದು ನಮ್ಮ ಪದ್ಧತಿ. ಒಂದು ಒಳ್ಳೆಯ ವ್ಯಕ್ತಿಯಾಗಿ ಮಗುವನ್ನು ರೂಪಿಸಿದ ತಂದೆ ತಾಯಿಗಳಿಗೆ ಗುರುಗಳಿಗೆ ಸಿಗುವ ಸಂತೋಷ, ಧನ್ಯತಾ ಭಾವನೆ ಬೇರೆ ಯಾವ ಲಾಭದಿಂದಲೂ ಸಿಗಲಾರದು.

ದೀನರ, ದಲಿತರ, ದುರ್ಬಲರ ಸೇವೆಯೂ ಉಪಕಾರ ಮಾಡುವೆನೆಂಬ ಹಮ್ಮಿನಿಂದ ಸಲ್ಲದು. ಗಾಂಧೀಜೀ "ದರಿದ್ರ ನಾರಾಯಣನೆಂಬ ಭಾವದಿಂದ ಸೇವೆ ಮಾಡಬೇಕೆಂದರು". ವಿವೇಕಾನಂದರೇ ಮೊದಲಾದ ಗುರು ಜನರು "ದೇವ ಭಾವದಿಂದ ಜೀವ ಸೇವೆ" ಎಂದು ಉಪದೇಶಿಸಿರುವರು.

ಧರ್ಮಶಾಸ್ತ್ರವು ನಾವು ಬೇರೆಯವರ ದುಃಖದಲ್ಲಿ ಭಾಗಿಗಳಾದರೆ, ಅವರ ಕಷ್ಟದ ಹೊರೆ ಹಗುರ ಮಾಡಿದರೆ ನಮ್ಮ ಪ್ರಾರಬ್ಧದ ಫಲವಾಗಿ ಬರಬಹುದಾದ ಅಂತಹ ಕಷ್ಟಗಳು ಕಡಿಮೆ ಆಗುತವೆ ಅಥವಾ ಬರದೇ ಹೋಗಬಹುದು ಎಂದು ಸಾರುತದೆ.

ವ್ಯಾವಹಾರಿಕವಾಗಿಯೂ ಇತರರ ಕಷ್ಟಗಳಿಗೆ ಸ್ಪಂದಿಸುವವನಿಗೆ ತನ್ನ ಕಷ್ಟಗಳು ಅಥವಾ ಹಾಗೇ ಭಾವಿಸಿಕೊಂಡು ಬರುವ ವ್ಯಥೆಗಳು ದೂರವಾಗಿ ಸಮಾಧಾನ ಸಿಗುತ್ತದೆ.

ದೇಶ ಸೇವೆ, ಸಮಾಜ ಸೇವೆಗಳು ಸಮಷ್ಟಿಯ ಹಿತವನ್ನುಂಟು ಮಾಡಿ, ಆ ಮೂಲಕ ಅದರ ಭಾಗವಾಗಿರುವ ನಮಗೇ ಲಾಭದಾಯಕಗಳು. ಅಂತಹ ವ್ಯಕ್ತಿಗಳು ಅಮರರಾಗುತ್ತಾರೆ.

ಸೇವಾವೃತ್ತಿ "ವರ್ಣಪದ್ಧತಿ" ಎಂದು ತಿಳಿದು ಗೊಂದಲ ಮಾಡಿಕೊಳ್ಳದಿದ್ದರೆ, ವೃತ್ತಿಗಳೆಲ್ಲಾ ಸೇವೆಯಾಗುತದೆ. ಲೋಕ ಹಿತಕಾರಕವಾಗುತ್ತದೆ. ಉನ್ನತ ಸ್ಥಾನದಲ್ಲಿರುವ ಅಧಿಕಾರಿಯೂ, ಸಾಮಾನ್ಯ ನೌಕರನೂ ಮಾನ್ಯನಾಗುವುದು ಅವನ ಕೆಲಸವನ್ನು ಹೇಗೆ ನಿರ್ವಹಿಸುತಾನೆ ಎಂಬುದರಿಂದ, ಸರಿಯಾಗಿ, ಸೇವಾರೂಪವಾಗಿ ಶ್ರದ್ಧೆ ಇಲ್ಲದೆ ಕೇವಲ ಫಲ ಅಪೇಕ್ಷಿಸುವವನು ನಿಂದ್ಯನಾಗುವನು. ಸೇವಾ ವೃತ್ತಿಯವರಿಂದಲೇ ಸಮಾಜ ನಿಂತಿದೆ ಎಂಬುದು ಪರಮ ಸತ್ಯ.

ಈ ರೀತಿ ಸೇವೆಯು ವಿಚಾರಪೂರ್ವಕ ಆಚಾರವಾದರೆ ಪ್ರತಿಯೊಬ್ಬನೂ ವಿಭಿನ್ನ ರೀತಿಯಲಿ ಸೇವಕನಾಗಿ ಶ್ರದ್ಧೆಯಿಂದ ಬಾಳಿದರೆ ಲೋಕದಲ್ಲಿ ಸುಖ, ಶಾಂತಿಗಳು ನೆಲಸುತ್ತವೆ. ಈ ಪಥದಲ್ಲಿ ನಾವೆಲ್ಲ ಮುನ್ನಡೆಯೋಣ.

"ಶುಭಂ ಅಸ್ತು"





Krishna Rao

Ph :2520652
Mob. :9902029048



**KISHAN**

Studio & Video



Indoor Photography & Port Folio Photography,
Video & Mixing, Lamination

MAIN ROAD, MAJOOR & BANTAKAL.

Rao's 'ಮಾತೃಛಾಯಾ'ರವರ

ಉಡುಪಿ ವಿಶಿಷ್ಟ ರುಚಿಯುಳ್ಳ

ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪಿಮಿಡಿ ಹಾಗೂ ಮಿಡಿ ಉಪ್ಪಿನಕಾಯಿ
ಹಪ್ಪಳ ಹಾಗೂ ಸೆಂಡಿಗೆಗಳು, ಶುದ ದನದ ತುಪ್ಪ ಹಾಗೂ ಜೇನು ತುಪ್ಪ

**-: ಮೊದಲಾದ ನಿತ್ಯೋಪಯೋಗಿ ವಸ್ತುಗಳಗೆ ಸಂದರ್ಶಿಸಿರಿ :-**

**ಭಾರತ್ ಸ್ಟೋರ್ಸ್**

**ರಥಬೀದಿ, ಉಡುಪಿ - 576 101. ಫೋನ್ : 2522444**

# ಕುಮಾರವ್ಯಾಸನ ಕೃಷ್ಣ ಸ್ತುತಿ



- ವೈ. ಶಂಕರನಾರಾಯಣ ರಾವ್,
ಪಡುಬಿದ್ರಿ

''ಕುಮಾರ ವ್ಯಾಸ'' ಕಾವ್ಯ ನಾಮಾಂಕಿತನಾದ ಗದುಗಿನ ನಾರಣಪ್ಪನು ಯಾವ ಶತಮಾನದಲ್ಲಿ ಜೀವಿಸಿದ್ದ ಎಂಬುದರ ಬಗ್ಗೆ ಸ್ಪಷ್ಟವಿಲ್ಲ. ಅವನು ಹದಿಮೂರನೆಯ ಶತಮಾನದಿಂದ ಹದಿನೈದನೆಯ ಶತಮಾನದ ನಡುವಿನಲ್ಲಿ ಜೀವಿಸಿದ್ದಿರಬಹುದೆಂದು ಸಂಶೋಧಕರಿಂದ ಅಂದಾಜಿಸಲಾಗಿದೆ. ಕವಿ ಕುವೆಂಪು ಅವನ ಮೇರು ಕಾವ್ಯರಸ ಧಾರೆಯನ್ನು :-

*ಕುಮಾರ ವ್ಯಾಸನು ಹಾಡಿದನೆಂದರೆ*
*ಕಲಿಯುಗ ದ್ವಾಪರವಾಗುವುದು*
*ಭಾರತ ಕಣ್ಣಲಿ ಕುಣಿವುದು! ಮೈಯಲಿ*
*ಮಿಂಚಿನ ಹೊಳೆ ತುಳುಕಾಡುವುದು!*

ಎಂದು ಮುಕ್ತ ಕಂಠದಿಂದ ಹೊಗಳಿದ್ದಾರೆ. ಪ್ರತಿನಿತ್ಯ ನಾರಣಪ್ಪನು ಕೆರೆಯಲ್ಲಿ ಮುಳುಗು ಹಾಕಿ ಒದ್ದೆ ಬಟ್ಟೆಯುಟ್ಟುಕೊಂಡು ತೇವ ಆರುವವರೆಗೆ ವೀರನಾರಾಯಣನ ಗುಡಿಯ ಕಂಭಕ್ಕೆ ಒರಗಿ ಭಕ್ತಿಯಿಂದ ಈ ಕಾವ್ಯವನ್ನು ಬರೆದನೆಂದು ಐತಿಹ್ಯವಿದೆ. ಕವಿಗೆ ಇದು ಬರಿಯ ಕೌರವ-ಪಾಂಡವರೊಳಗಿನ ದಾಯಾದಿ ಕಲಹ ''ಮಹಾಭಾರತ''ವಾಗಿರಲಿಲ್ಲ.

''ತಿಳಿಯ ಹೇಳುವೆ ಕೃಷ್ಣ ಕತೆಯನು
ಇಳೆಯ ಜಾಣರು ಮೆಚ್ಚುವಂತಿರೆ
ನೆಲೆಗೆ ಪಂಚಮ ಶ್ರುತಿಯನೊರೆವೆನು ಕೃಷ್ಣ ಮೆಚ್ಚಲಿಕೆ'' ಎಂದು ಕವಿ ಪೀಠಿಕಾ ಸಂಧಿಯಲ್ಲಿ ಹೇಳಿಕೊಂಡಿದ್ದಾನೆ. ಅಲ್ಲದೆ ''ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ ತಿಂತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ'' ಎಂದು ತಾನೇಕೆ ರಾಮಾಯಣ ಕಾವ್ಯವನ್ನು ರಚಿಸಲು ಮನ ಮಾಡಲಿಲ್ಲ ಎಂದೂ ತಿಳಿಸಿದ್ದಾನೆ. ''ಶ್ರೀ ಕೃಷ್ಣನ ಪಾತ್ರ ಕುಮಾರವ್ಯಾಸನ ಭಾರತದಲ್ಲಿ ಅತ್ಯಂತ ಪ್ರಧಾನವೂ, ವಿಶಿಷ್ಟವೂ ಸರ್ವಪ್ರೇರಕವೂ ಚೋದಕವೂ ಆದುದು'' ಎಂದು ಕುವೆಂಪು ಅಭಿಪ್ರಾಯಪಟ್ಟಿದ್ದಾರೆ. ಈ ಭಕ್ತ ಕವಿಯ ಕೃಷ್ಣ ಭಕ್ತಿಯ ಸೆಲೆ ಹಲವು ಪದ್ಯಗಳಲ್ಲಿ ಕಾರಂಜಿಯಾಗಿ ಪುಟಿದು ಚಿಮ್ಮಿದೆ. ಭಕ್ತಿಯ ಪರಾಕಾಷ್ಠೆಯಿಂದ ತುಂಬಿರುವ ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿರುವ ಅಂತಹ ಹಲವು ಪದ್ಯಗಳನ್ನು ಇಲ್ಲಿ ಉದ್ಧರಿಸಲಾಗಿದೆ.

ತಮ್ಮ ರಾಜಧಾನಿಯಾದ ಇಂದ್ರಪ್ರಸ್ಥದಲ್ಲಿ ಪಾಂಡವರು ರಾಜ ಸೂಯಾಧ್ವರವನ್ನು ಕೈಗೊಳ್ಳುತ್ತಾರೆ. ಯಾಗಕ್ಕೆ ಆಗಮಿಸಿದ ಅತಿಥಿಗಳಲ್ಲಿ ಶ್ರೀಕೃಷ್ಣನು ಶ್ರೇಷ್ಠನೆಂದು ತೀರ್ಮಾನಿಸಿ ಪಾಂಡವರು ಅವನಿಗೆ ಅಗ್ರಪೂಜೆ ಸಲ್ಲಿಸುತ್ತಾರೆ. ಪೂರ್ವದ್ವೇಷ ಪೀಡಿತನಾದ ಶಿಶುಪಾಲನೆಂಬ ಖಳನು ಇದನ್ನು ಸಹಿಸದೆ ಶ್ರೀಕೃಷ್ಣನನ್ನು ನಾನಾ ವಿಧಗಳಿಂದ ನಿಂದಿಸುತ್ತಾನೆ. ಭೀಷ್ಮರು ಶಿಶುಪಾಲನ ನಿಂದನೆಗಳನ್ನು ಖಂಡಿಸಿ ಬಹು ವಿಧಗಳಿಂದ ದೇವನ ಮಹಿಮೆಯನ್ನು ಕೊಂಡಾಡಿ ಸ್ತುತಿಸುತ್ತಾರೆ. ಸಭಾಪರ್ವದ ಈ ಸಂಧಿಯಲ್ಲಿ 65 ಪದ್ಯಗಳಿದ್ದು ಇವೆಲ್ಲವೂ ಪೂರ್ತಿಯಾಗಿ ಶ್ರೀಕೃಷ್ಣ ಸ್ತುತಿಗೆ ಅರ್ಪಿತವಾಗಿದೆ. ಈ ಎರಡೂ ಪದ್ಯಗಳನ್ನು ಗಮನಿಸಿರಿ:-

*1) ಗಗನವೀತನ ನಾಭಿ ದಶದಿ*
*ಕ್ಕುಗಳು ಕಿವಿ ಫಣಿಲೋಕ ವಿಮಳಾಂ*
*ಘ್ರಿಗಳು ಧ್ರುವನಿಂ ಮೇಲು ಭಾಗ ಮುರಾಂತಕನ ಮುಕುಟ*
*ಗಗನ ಮಣಿ ಶಂಕರ ವಿರಿಂಚಾ*
*ದಿಗಳು ದೇವನ ರೋಮ ಕೂಪದೊ*
*ಳಗಣಿತಾಮರ ನಿಕರಬಹುದಿದನರಿವರಾರೆಂದ*

*2) ವಿಶ್ವಶಿಲ್ಪದ ಕುಶಲ ಹಸ್ತನು*
*ವಿಶ್ವರಕ್ಷೆಯ ಮಂತ್ರವಾದಿಯು*
*ವಿಶ್ವ ಸಮಿಧೆಗಳಗ್ನಿ ಕಾರ್ಯದ ಬೊಮ್ಮಚಾರಿ ವಟು*
*ವಿಶ್ವನಾಟಕ ಸೂತ್ರಧಾರನು*
*ವಿಶ್ವ ವಿಸ್ಮಯ ದೈಂದ್ರ ಜಾಲಕ*
*ವಿಶ್ವದಂತಸ್ಯೂತ ಚೇತನನೀತ ನೋಡೆಂದ*

ಮುಂದೆ ಖಳ ದುಶ್ಯಾಸನದಿಂದ ದ್ರೌಪದಿ ಮಾನಭಂಗಕ್ಕೊಳಗಾಗಲಿರುವ ಸಂದರ್ಭದಲ್ಲಿ ಕವಿಯು ಕರುಣಾ ರಸದೊಂದಿಗೆ ಭಕ್ತಿ ಸುಧಾಂಬುಧಿಯನ್ನೇ ಹರಿಯಬಿಟ್ಟಿದ್ದಾನೆ. ಇಲ್ಲಿ ದ್ರೌಪದಿಯ ಕೃಷ್ಣ ಸ್ತುತಿಯು ಸುಮಾರು 30 ಪದ್ಯಗಳಷ್ಟಕ್ಕೆ ವಿಸ್ತರಿಸಲ್ಪಟ್ಟಿದೆ. ಇದರಲ್ಲಿಯ ಎರಡು ಪದ್ಯಗಳನ್ನು ಕೆಳಗೆ ಕೊಡಲಾಗಿದೆ:-

*1) ನಾಥರಿಲ್ಲದ ಶಿಶುಗಳಿಗೆ ನೀ*
*ನಾಥನೈ ಗೋವಿಂದ ಸಲಹೈ*
*ಯೂಥಪತಿಗಳು ಬಿಸುಟ ತರುಣಿಗೆ ಕೃಪೆಯ ನೀ ಮಾಡೈ*
*ನಾಥರಿಲ್ಲೆನಗಿಂದು ದೀನಾ*
*ನಾಥಬಾಂಧವ ನೀನಲ್ಲೈ ವರ*
*ಮೈಥಿಲೀಪತಿ ಮನ್ನಿಸೆಂದೊರಲಿದಳು ಮೃಗನಯನೆ*

*2) ನಂದಗೋಪ ಕುಮಾರ ಗೋಪೀ*
*ವೃಂದ ವಲ್ಲಭ ದೈತ್ಯಮಥನ ಮು*
*ಕುಂದ ಮುರಹರ ಭಕ್ತವತ್ಸಲ ಘನ ಕೃಪಾಜಲಧೆ*
*ನೊಂದೆನೈ ನುಗ್ಗಾದೆನೈ ಗೋ*
*ವಿಂದ ಕೃಪೆ ಮಾಡಕಟೆನುತ ಪೂ*
*ರ್ಣೇಂದುಮುಖಿ ಹಲುಬಿದಳು ಬಲು ತೆರದಿಂದಲಚುತನ*

ವಿರಾಟಪರ್ವದಲ್ಲಿ ಅಭಿಮನ್ಯು-ಉತ್ತರೆಯರ ವಿವಾಹಕ್ಕೆಂದು ಆಗಮಿಸಿದ ಶ್ರೀಕೃಷ್ಣನ ಸೌಂದರ್ಯ ಶೋಭೆಯನ್ನು ಕವಿ ಭಕ್ತಿಯಿಂದ ಈ ರೀತಿ ವರ್ಣಿಸಿದ್ದಾನೆ:-

*ಅಂಗನೆಯರರವಿಂದನಾಭನ*
*ಮಂಗಳ ಶ್ರೀಮೂರ್ತಿ ಸುಧೆಯನು*
*ಕಂಗಳಲಿ ಕುಡಿ ಕುಡಿದು ಪಡೆಯರು ಮತ್ತೆ ದಣಿವುಗಳ*
*ಅಂಗಜನ ಪೆತ್ತಯ್ಯ ನೀ ರೂ*
*ಹಿಂಗೆ ಬಡವನೆಯೆನುತ ಮುರಹರ*
*ನಂಗ ಶೋಭೆಯ ಬಂದಿಯಲಿ ಸಿಲುಕಿತ್ತು ಸತಿನಿವಹ*

ಮುಂದೆ ಉದ್ಯೋಗಪರ್ವದಲ್ಲಿ ಸಂಧಾನಕ್ಕೆಂದು ಕೌರವರಾಯನ ಅರಮನೆಗೆ ಬಂದ ಶ್ರೀಕೃಷ್ಣನನ್ನು ಕವಿ ಚೇತೋಹಾರಿಯಾಗಿ ಈ ರೀತಿ ವರ್ಣಿಸಿ ಭಕ್ತಿಯ ಪರಾಕಾಷ್ಠೆಯನ್ನು ಮೆರೆದಿದ್ದಾನೆ:-

*1) ಕಂಜಸಂಭವ ಪಿತನು ಬಂದನು*
*ನಂಜಿನಲಿ ಪವಡಿಸುವ ಬಂದನು*
*ಕುಂಜರನ ಮೊರೆಗೇಳಿ ಸಲಹಿದ ದೇವನಿದೆ ಬಂದ*
*ಅಂಜನಾಸುತನೊಡೆಯ ಬಂದನು*
*ಅಂಜಿದಸುರನಿಗಭಯವಿತ್ತವ*
*ಭಂಜನೆಗೆ ಬಲು ದೈವ ಬಂದನು ನೃಪತಿಯರ ಮನೆಗೆ*

*2) ಅರಸ ಬಂದನು ಭಾಗವತಜನ*
*ಪರುಷ ಬಂದನು ಭಕ್ತ ವತ್ಸಲ*
*ಕರುಣಿ ಬಂದನು ತನ್ನ ನೆನೆದರೆ ಪರಮಪದವೀವ*
*ಪರಮಪುರುಷೋತ್ತಮನು ಬಂದನು*
*ದುರಿತದುರ್ಗ ವಿಭಾಡ ಬಂದನು*
*ಸುರರ ಸಲಹುವ ದೇವ ಬಂದನು ನೃಪತಿಯರ ಮನೆಗೆ*

ಕುರುಕ್ಷೇತ್ರ ಯುದ್ಧಭೂಮಿಯ ಮಂಚೂಣಿಯಲ್ಲಿ ರಥವನ್ನು ನಿಲ್ಲಿಸಿ ಪಾರ್ಥಸಾರಥಿ ಕೃಷ್ಣನು ಅರ್ಜುನನಿಗೆ ಇದಿರಲ್ಲಿ ನಿಂತಿರುವ ಕೌರವ ಸೇನೆಯ ವೀರರನ್ನು ತೋರಿಸಿ ಅವರ ಶೌರ್ಯವನ್ನು ವರ್ಣಿಸುವನು. ತನ್ನ ಇದಿರಲ್ಲಿ ಗುರುಹಿರಿಯರು, ಬಂಧುಬಾಂಧವರನೇಕರು ಶತ್ರುರೂಪದಲ್ಲಿ ನಿಂತಿರುವುದನ್ನು ಕಂಡು ವಿಚಲಿತನಾದ ಅರ್ಜುನನು ಶಸ್ತ್ರಸನ್ಯಾಸ ಮಾಡಿ ತನ್ನಿಂದ ಯುದ್ಧ ಅಸಾಧ್ಯ ಎಂದು ನುಡಿಯುವನು. ಅರ್ಜುನನ ಹೇಡಿತನವನ್ನು ನಿವಾರಿಸಲು ಕೃಷ್ಣನು ತನ್ನ ವಿಶ್ವರೂಪವನ್ನು ತೋರಿಸಲು ಅರ್ಜುನನು ಬೆರಗಾಗಿ ಅಂಜಿ ಹಿಂದಿನ ರೂಪವನ್ನು ಹೊಂದುವಂತೆ ದೇವನನ್ನು ಪ್ರಾರ್ಥಿಸುತ್ತಾನೆ. ಭೀಷ್ಮಪರ್ವದಲ್ಲಿ ಬರುವ ಈ ಪ್ರಸಂಗದ ಕೃಷ್ಣ ಸ್ತುತಿಯ ಎರಡು ಪದ್ಯಗಳನ್ನು ಅವಲೋಕಿಸೋಣ:-

*1) ಎಳನಗೆಯ ಸಿರಿಮೊಗವ ಚೆಲುವಿನ*
*ಹೊಳೆ ಹೊಳೆವ ನಿಟ್ಟೆಸಳುಗಂಗಳ*
*ತೊಳಪ ಕದಪಿನ ಮಿಸುಪ ಕಾಂತಿಯ ಮಕರಕುಂಡಲದ*
*ಲಲಿತಕಂಠದ ಕೌಸ್ತುಭೋರ*
*ಸ್ಥಳದ ನಿಡುದೋಳುಗಳ ಕೋಮಲ*
*'ತಳಿತ' ಪೀತಾಂಬರದ ಮುನ್ನಿನ ರೂಪ ತೋರೆಂದ*

*2) ನಳಿನನಾಭ ಮುಕುಂದ ಮಂಗಳ*
*ನಿಳಯ ಭಕ್ತವ್ಯಸನಿ ದೈತ್ಯ*
*ಪ್ರಳಯ ಪಾವಕ ಭಕ್ತವತ್ಸಲ ಭಕ್ತ ಸುರಧೇನು*
*ಲಲಿತಮೇಘಶ್ಯಾಮ ಸೇವಕ*
*ಸುಲಭ ಶೌರಿ ಮುರಾರಿ ಭಕ್ತಾ*
*ವಳಿ ಕುಟುಂಬಕ ಕೃಷ್ಣಕೇಶವ ಕರುಣಿಸೆನಗೆಂದ*

''ಹೇ ಶ್ರೀಕೃಷ್ಣನೆಂಬ ಮಂಗಳ ಮೂರ್ತಿಯೇ, ನೀನು ಗತಿವಿಹೀನರಿಗೆ ಗತಿ; ರಿಪು ಬಾಧಿತರಿಗೆ, ಅಬಲೆಯರಿಗೆ, ಆರ್ತರಿಗೆ ಪರಮ ಬಂಧು. ನೀನು ತುರುವ ನುಂಗಿದ ಫಣಿಯ ಗಂಟಲನ್ನು ಮುರಿದವ. ಇಂದ್ರನ ಕಪಟದಿಂದ ಗೋವುಗಳನ್ನು ಕಾಯಲು ಮಂದರ ಪರ್ವತವನ್ನು ಧರಿಸಿದವ. ನೀನು ಕರುಣಾಸಿಂಧು; ಅನಾಥ ಬಂಧು; ಭಕ್ತಜನ ಕುಟುಂಬಿ. ಹೆತ್ತವರ ಸೆರೆಯನ್ನು ಬಿಡಿಸಿದವ; ಹದಿನಾರು ಸಾವಿರ ದೇವಕನ್ಯೆಯರ ಸೆರೆಯನ್ನು ತೊಲಗಿಸಿ ಅವರಿಗೆ ಪರಮ ಪತಿಯಾದವ. ಹಲವಾರು ಅವತಾರಗಳನ್ನು ಎತ್ತಿದವ. ಇದು ಸರಿಯೇ ಸರಿ. ಆದರೆ ನಾನು ಮಾಡಿದ್ದೇನು? ನನ್ನ ಅಭ್ಯುದಯದ ಕಾಲದಲ್ಲಿ ನಿನ್ನನ್ನು ಮರೆತೆನು. ಈಗ ಆಪತ್ತಿನಲ್ಲಿ ನಿನ್ನನ್ನೇ ನೆನೆಸುತ್ತಿರುವೆನು. ಸುಖ ಭೋಗಗಳ ಮದದಿಂದ ನಿನ್ನನ್ನು ಮರೆತೆನು. ದುರ್ಗತಿಗೆ ಈಡಾಗಿ ಕಳವಳಿಸುತ್ತಿರುವ ಖೋಡಿಯು (ಹೀನಳು) ನಾನು. ನನ್ನಂತಹ ಅಜ್ಞಳಲ್ಲಿ ಗುಣವಿಹೀನತೆಯನ್ನು ಪರಿಗಣಿಸದೆ ನಿನ್ನಡಿಗಳ ಕೃಪೆಯನ್ನು ತೋರಲಾರೆಯಾ? ''ಇದು ನವರಸ ಕವಿ ನಾರಣಪ್ಪನು ದ್ರೌಪದಿಯ ಶ್ರೀಮುಖದಿಂದ ನುಡಿಸಿದ ಭಕ್ತಿಭಾವದ ಸಾರಾಂಶ. □

---

# ಈಶಾವಾಸ್ಯಂ ವೇದಾಧ್ಯಯನ ಸಂಚಾರಿ ಗುರುಕುಲ, ಬೆಂಗಳೂರು

**ಓಂ ಈಶಾವಾಸ್ಯಮಿದಗ್ಂ ಸರ್ವ ಯತ್ಕಿಂಚ ಜಗತ್ಯಾಂ ಜಗತ್ ।**
**ತೇನ ತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯ ಸ್ವಿದ್ಧನಮ್ ॥**
**(ಗುರುಕುಲ ಪ್ರಾರ್ಥನಾ ಮಂತ್ರಾಃ)**

2009ನೇ ವರ್ಷದ ಶರನ್ನವರಾತ್ರಿಯ ಪ್ರಥಮ ದಿನದಂದು 'ಮನೆ ಮನೆಗೂ ವೇದ ಪ್ರಸಾರ'' ಮಾಡುವ ಸದುದ್ದೇಶ ಪ್ರೇರಿತ ಅಧ್ಯಾತ್ಮ ತತ್ವ ಬೋಧಕ ಹಾಗೂ ವೇದ ಪಠಣ ಅಭ್ಯಾಸ ಮಾಡಿಸುವ ''ಓಂ ಈಶಾವಾಸ್ಯಮ್ ವೇದಾಧ್ಯಯನ ಗುರುಕುಲ'' ಎಂಬ ಸಂಸ್ಥೆಯು ಬೆಂಗಳೂರು ಮಹಾನಗರದಲ್ಲಿ ಸ್ಥಾಪನೆಯಾಯಿತು. ಇದೊಂದು ವಿನೂತನ, ವಿಶಿಷ್ಟ ಹಾಗೂ ಕ್ರಾಂತಿಕಾರಿ ಅಭಿಯಾನ. ಆಧಿ ದೈವಿಕ ನೆಲೆಯಲ್ಲಿ ಗುರುಕುಲದ ಧ್ಯೇಯ ಬ್ರಾಹ್ಮಣ ತ್ರಿಮತಸ್ಥ ಜಿಜ್ಞಾಸುಗಳಿಗೆ ''ವೇದ-ವೇದಾಂತ (ಉಪನಿಷತ್ತು) ಸಾರ ಸುಧಾರಸ ದಾನಯಜ್ಞ''

**ಪ್ರಥಮ ವರ್ಷ (ಸೆ।೨೦೦೯-ಆ।೨೦೧೦)**

*ಕೃಷ್ಣಯಜುರ್ವೇದ ಸಂಹಿತಾ- ಶಾಂತಿ ಮಂತ್ರಾಃ, ಪುರುಷಸೂಕ್ತಮ್, ನಾರಾಯಣ ಸೂಕ್ತಮ್, ದುರ್ಗಾಸೂಕ್ತಮ್, ಲಘುನ್ಯಾಸ ಸಹಿತ ರುದ್ರಪ್ರಶ್ನಃ ಚಮಕ ಪ್ರಶ್ನಃ, ಶಿವೋಪಾಸನ ಮಂತ್ರಾಃ ಯೋಪಾಂಪುಷ್ಪಂ ವೇದ (ಮಂತ್ರಪುಷ್ಪಂ), ಗಣೇಶ ಅಥರ್ವಶೀರ್ಷಮ್, ತ್ರಿಸುವರ್ಣ ಮಂತ್ರಾಃ, ಚೂರ್ಣಿಕಾ ಭಾಗ.*

ಗುರುಕುಲದ ಶಿಷ್ಯತ್ವವನ್ನು ಸ್ವೀಕರಿಸಿ 10 ವಿದ್ಯಾರ್ಥಿಗಳು (12 ವರ್ಷದ ಓರ್ವ ಬಾಲಕಿ, ಇಬ್ಬರು ಪುರುಷರು, ಏಳು ಮಹಿಳೆಯರು) ಪ್ರಥಮ ವರ್ಷದಲ್ಲಿ ಕೃಷ್ಣ ಯಜುರ್ವೇದದ ಮೇಲ್ಕಾಣಿಸಿದ ಸೂಕ್ತಗಳ ಅಧ್ಯಯನ, ಅಭ್ಯಾಸ ಮಾಡಿರುವುದು ಸ್ತುತ್ಯಾರ್ಹ. ಸುಮಾರು 16 ವರುಷ ವೇದ-ಉಪನಿಷತ್ತುಗಳ ಪಠಣ, ಅಧ್ಯಯನದ ಅನುಭವವುಳ್ಳ ಶ್ರೀಯುತ ಜಿ.ಕೆ. ರಾಯರು ಗುರುಕುಲದ ಪ್ರಾಧ್ಯಾಪಕರಾಗಿ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಮಾಡಿರುವರು.

ಶನಿವಾರ ಸಾಯಂಕಾಲ ಬೆಂಗಳೂರಿನ ರಾಜಾಜಿನಗರದ ಮೂರನೇ ಬ್ಲಾಕ್‌ನಲ್ಲಿ ಶ್ರೀರಾಮಮಂದಿರ ಸಮೀಪವಿರುವ ಶ್ರೀಮತಿ ಕಲ್ಯಾಣಿ ಬಿ.ಪಿ.ರಾವ್ ಇವರ ಸ್ವಗೃಹದಲ್ಲೂ, ಭಾನುವಾರ ಪ್ರಾತಃ ಕಾಲ ಬೆಂಗಳೂರು ಕಮಲಾನಗರದಲ್ಲಿರುವ ಶ್ರೀ ವೈ.ಎಸ್. ಸುರೇಂದ್ರ ಅವರ ಸ್ವಗೃಹದಲ್ಲೂ ತರಗತಿಗಳನ್ನು ನಡೆಸಲಾಯಿತು. ತಮ್ಮ ಮನೆಯಲ್ಲಿ ಉಚಿತ ಸ್ಥಳಾವಕಾಶವನ್ನು ನೀಡಿ ಗುರುಕುಲದ ಉದ್ದೇಶವನ್ನು ಸಾಕಾರಗೊಳಿಸುವಲ್ಲಿ ಸಹಕಾರ ನೀಡಿರುವ ಈ ಇಬ್ಬರು 'ಗುರುಕುಲ ಪೋಷಕ'ರಿಗೂ, ಅವರ ಕುಟುಂಬದವರಿಗೂ ಗುರುಕುಲವು ಧನ್ಯವಾದಗಳನ್ನು ಸಲ್ಲಿಸುವುದರೊಡನೆ ಅವರೆಲ್ಲರಿಗೂ 'ವೇದಪುರುಷ'ನ ಪೂರ್ಣಾನುಗ್ರಹ ದೊರೆಯಲೆಂದು ಪ್ರಾರ್ಥಿಸುತ್ತದೆ.

**2011-ದ್ವಿತೀಯ ವರ್ಷ-ಋಗ್ವೇದ ಸಂಹಿತಾಃ**

*ಅಗ್ನಿಮೀಳೇ ಸೂಕ್ತಮ್-೧ (ವೇದಾದಿ ಮಂತ್ರಾ), ಸ್ವಸ್ತಿನೋಮಿಮೀತಾ ಸೂಕ್ತಮ್, ಗಣೇಶ ಸೂಕ್ತಮ್, ಪುರುಷಸೂಕ್ತಮ್, ಶ್ರೀ ದೇವಿಸೂಕ್ತಮ್, ಪವಮಾನಸೂಕ್ತಮ್ (೧-೧೦), ಈಶಾವಾಸ್ಯೋಪನಿಷತ್, ಅಷ್ಟಾವಧಾನ ಸೇವೆ.*

2011, ಜನವರಿ 1ರಿಂದ ದ್ವಿತೀಯ ವರ್ಷದ ಪಾಠಪಟ್ಟಿಯಲ್ಲಿರುವ ಮಂತ್ರಗಳ ಅಧ್ಯಯನ/ಪಠಣವು ಪ್ರಾರಂಭಿಸಲಾಗಿದೆ. ರಾಜಾಜಿನಗರದ ಶ್ರೀಮತಿ ಕಲ್ಯಾಣಿ ಬಿ.ಎ. ರಾವ್‌ರವರ ಸ್ವಗೃಹದಲ್ಲಿ ಪ್ರತಿ ಶನಿವಾರ ಸಾಯಂಕಾಲ 3-6ರ ವರೆಗೆ ತರಗತಿಗಳನ್ನು ನಡೆಸಲಾಗುವುದು. ಋಗ್ವೇದ ಮಂತ್ರಗಳೊಡನೆ ಪ್ರಥಮ ವರ್ಷದ ಯಜುರ್ವೇದ ಮಂತ್ರಗಳ ಪುನರಭ್ಯಾಸ ಮಾಡಿಸಲಾಗುವುದು. ಇದರಿಂದ ಪಠಣ ಕ್ರಮವು ದೋಷರಹಿತವಾಗಿ ಪರಿಪೂರ್ಣತೆಯನ್ನು ಪಡೆಯಲು ಸಹಕಾರಿಯಾಗುವುದಲ್ಲದೆ, ಹೊಸತಾಗಿ ಗುರುಕುಲವನ್ನು ಸೇರಲು ಅಭಿಲಾಷೆಯುಳ್ಳ ವಿದ್ಯಾರ್ಥಿಗಳಿಗೆ ಪ್ರಥಮ ವರ್ಷದ ಪಾಠಪಟ್ಟಿಯ ಸೂಕ್ತಗಳನ್ನೂ ಕಲಿಯಲು ಒಂದು ಸುವರ್ಣಾವಕಾಶ ಹಾಗೂ ಸ್ವಾಗತ. ತರಗತಿಯ ದಿನ (ಶನಿವಾರ), ಸಮಯ (ಸಾ।3-6)ದ ಬಗ್ಗೆ ಶ್ರೀಮತಿ ಕಲ್ಯಾಣಿ ಬಿ.ಎ. ರಾವ್‌ರವರನ್ನು ಮುಂಚಿತವಾಗಿ ಸಂಪರ್ಕಿಸಬೇಕು. (ಮೊ।9886056494) ಗುರುಕುಲದ ಪ್ರಾಧ್ಯಾಪಕ ಶ್ರೀ ಜಿ.ಕೆ.ರಾವ್‌ರವರನ್ನೂ ಸಂಪರ್ಕಿಸಬಹುದು (ದೂ.ವಾ.0802 3230992, ಮೊ।9448206073) ವೇದಪಠಣ ತರಗತಿಗೆ ಮುಕ್ತ ಪ್ರವೇಶ. ಉಚಿತ ಸಂಸ್ಕೃತ ಭಾಷಾಜ್ಞಾನ, ಲಿಪಿ ಯಾ ಮಂತ್ರಗಳ ಕಂಠ ಪಾಠ ಅನಿವಾರ್ಯವಲ್ಲ. ಕನ್ನಡ ಲಿಪಿಯಲ್ಲಿ ಮುದ್ರಿತ ಶ್ರೀ ರಾಮಕೃಷ್ಣ ಮಠದವರು ಪ್ರಕಟಿಸಿದ 'ಸಸ್ವರ ವೇದಮಂತ್ರಾಃ' ದಿಂದ ಆಯ್ದ ಮೇಲ್ಕಾಣಿಸಿದ ಸೂಕ್ತಗಳ ಪಠಣದ ಅಭ್ಯಾಸ ಮಾಡಿಸಲಾಗುವುದು. ಬೆಂಗಳೂರಿನ ಇತರ ಭಾಗಗಳಲ್ಲಿ ತರಗತಿಗಳನ್ನು ನಡೆಸಲು ಅಪೇಕ್ಷಿಸುವವರು ಗುರುಕುಲದ ಪ್ರಾಧ್ಯಾಪಕರನ್ನು ಸಂಪರ್ಕಿಸಬೇಕಾಗಿ ವಿನಂತಿ. 8-80 ವರ್ಷದವರಿಗೆ ಅವಕಾಶವಿದೆ.

(ಗುರುಕುಲ ಪ್ರಕಟಣೆ-5) **ಜಿ.ಕೆ.ರಾವ್, ಪ್ರಾಧ್ಯಾಪಕರು**
**ಮೊಬೈಲ್ : 9448206073ಇಗ**

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ। ಪ್ರೊ। ಗುರುರಾಜ ಭಟ್ಟರ
ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

ಇವರ ನಂತರ ಮಚಿಲ ರಾಮಣ್ಣ ಎಂಬವರು ಮಣೆಗಾರರಾಗಿದ್ದರು. ಇವರ ನಂತರ ಎಂದರೆ ಕ್ರಿ.ಶ. 1882ರ ಅನಂತರದಲ್ಲಿ ಶಿವಳ್ಳಿಯವರಾದ ಬಾಗಲೋಡಿ ರಾಮಕೃಷ್ಣನವರಿಗೆ ಈ ಅಧಿಕಾರವು ಬಂದುದು ದೇವಳದ ತಾಮ್ರ ಶಾಸನ 3ರಲ್ಲಿ ಆ ದೇವಳದ ಧರ್ಮವನ್ನು ಸ್ಥಾನಿಕರು ನಡೆಸಿ ಬರುವುದು ಎಂತಲೂ ಇದೆ. ಎಂದರೆ ಈರ್ವರು ಹೆಬ್ಬಾರರು, ಆರು ಉಪಾಧಿವಂತರೂ ಇದನ್ನು ನಡೆಸಿಕೊಂಡು ಬರತಕ್ಕದ್ದು. ಈ ದೇವಳದ ಮುಖ್ಯ ಆಡಳಿತೆಯು ಸನದ್ ಮುಕ್ತೇಸರರಾದ ಸ್ವಾಮಿಗಳಿಗೂ ಎರಡು ಜನ ಶಿವಳ್ಳಿ ಪೂಜೆಯವರಿಗೂ ಹೋದ ನಂತರ ಉಳಿದ ಆರು ಉಪಾಧಿಗಳಾವುವು ವೆಂದರೆ–

1) ದೇವಳದ ಮಣೆಗಾರನಾಗಿ ಮುದ್ರೆ ಸರ ಧರಿಸಿ ದೇವಳದ ಲೆಕ್ಕಪತ್ರ ಇಡುವುದು.

2) ವರ್ಷಕ್ಕೊಂದು ಸಲ ಗರ್ಭಗೃಹಕ್ಕೆ ಹೋಗಿ ಹುತ್ತದಿಂದ ಮೂಲ ವೃತ್ತಿಗೆ ತೆಗೆಯುವುದು.

3) ಷಷ್ಠಿ ಉತ್ಸವದ ವೇಳೆ ಅನ್ನದ ಪಲ್ಲಕ್ಕೆ ನಾಲ್ಕು ಸಮಸ್ಥರ ಮುಂದೆ ಪ್ರಾರ್ಥನೆ ಮಾಡಿ ಚಿನ್ನದ ಹಿಡೆಯುಳ್ಳ ಅಕ್ಷಯ ಸಟ್ಟುಗ ಕುತ್ತುವುದು.

4) ದೇವಳದ ಮುಖ್ಯಸ್ಥನಾಗಿ ಭಕ್ತಾದಿಗಳಿಂದ ಕಾಣಿಕೆ, ಹರಕೆ ಸ್ವೀಕರಿಸಿ ಅದರ ಲೆಕ್ಕವಿಟ್ಟು ಪ್ರಸಾದ ಕೊಡುವುದು.

5) ಸರಕಾರಿ ನೌಕರರಿಗೆ ಮತ್ತು ಇತರ ಶ್ರೀಮಂತರಿಗೆ ಆಮಂತ್ರಣ ಕೊಟ್ಟು ಸತ್ಕರಿಸುವುದು.

6) ಎಂಟು ಜನ ಆಡಳಿತೆದಾರರಲ್ಲಿ ಖಾಲಿ ಬಿದ್ದ ಮುಕ್ತೇಸರತನಕ್ಕೆ ಹೊಸ ಆಡಳಿತೆಯವರನ್ನು ನೇಮಿಸುವುದು– ಹೀಗೆ ಆರು ಉಪಾಧಿಗಳು.

ದೇವಸ್ಥಾನಗಳಲ್ಲಿ ಪರಿಚಾಕರಿ ವೃತ್ತಿ ಎಂಬುದು ಹೀನವೆಂದು ಕಂಡುಬರುವುದಿಲ್ಲ. ಹಾಗೆ ತಿಳಿದುಕೊಳ್ಳುವುದು ತಪ್ಪು ಎಂಬುದು ನನ್ನ ಮತ. ಇತ್ತೀಚಿನವರೆಗೆ ಅಂದರೆ 1955ರ ವರೆಗೆ ಸುಬ್ರಹ್ಮಣ್ಯದ ಹೊರಕಾರ್ಯವನ್ನು (ಪರಿಚಾಕರಿ ವೃತ್ತಿಯನ್ನು) ಹವಿಕರಾದ ನಾರಾಯಣ ಭಟ್ಟರೆಂಬವರು ಮಾಡುತ್ತಿದ್ದರು. ನಗಾರಿ ಹೊಡೆಯುವ ಕೆಲಸ ಶಿವಳ್ಳಿಯವರಾದ ಶಬರಾಯ ಎಂಬವರು ಮಾಡುತ್ತಿದ್ದರು. ಈಗ ಹೆಬ್ಬಾರ ಕುಟುಂಬ ನಾಶವಾದರೂ, ಹೆಬ್ಬಾರ ಉದ್ಯೋಗವೆಂಬುದು ಉಳಿದಿದೆ. ಈ ಹೆಬ್ಬಾರ ಉದ್ಯೋಗವನ್ನು ಇತರರು ಮಾಡುತ್ತಾರೆ. ಅವರ ಉದ್ಯೋಗವು ದೇವಳದ ಎಲ್ಲಾ ಸ್ಥಳಗಳಿಗೆ ಕಟ್ಟಿಗೆಯವನ ಮುಖಾಂತರ ಬೀಗ ಹಾಕಿಸಿ ಮುದ್ರೆ ಮಾಡಿಸುವುದು. ಅದು ಸರಿಯಾಗಿದೆಯೇ ಎಂದು ನೋಡಿ ಮರುದಿವಸ ಬಾಗಿಲು ತೆಗೆದುಕೊಡುವುದು. ಬಂದ ಭಕ್ತಾದಿಗಳಿಗೆ ಪ್ರಸಾದ ಕೊಡುವುದು ಇತ್ಯಾದಿ. ಸುಬ್ರಹ್ಮಣ್ಯ ದೇವಳದ ಹಿಂದೆ ಗೋಪುರದಲ್ಲಿ ಮಣೆಗಾರ ಕಂಬವೊಂದಿದೆ. ಮುಂಚೆ ಇಲ್ಲಿ ಮಣೆಗಾರ ಕುಳಿತುಕೊಂಡು ತನಿಕೆ ನಡೆಸುವ ಕ್ರಮ. ಆ ಕಂಬಕ್ಕೆ ಈಗಲೂ ಮಹಾಪೂಜೆ ವೇಳೆ ದೀವಟಿಗೆ 'ಸಲಾಂ' ಮಾಡಿ ಮಹಾಪೂಜೆಗೆ ಆಮಂತ್ರಣ ಕೊಡುವ ಪದ್ಧತಿ ಇದೆ. ಇವೆಲ್ಲ ಮುಂಚಿನ ಸ್ಥಾನಿಕರ ಆಡಳಿತೆ ಸಮಯದಲ್ಲಿ ನಡೆದು ಬಂದ ಪದ್ಧತಿ ಆಗಿದೆ.

ಧರ್ಮಸ್ಥಳದ ವಿಚಾರವು ತಿಳಿಯಲು ಯೋಗ್ಯವಾದುದು. ಇಲ್ಲಿ ಆಡಳಿತೆಯು ವೈಲಕ್ಷಣ್ಯ ಉಳ್ಳುದಾಗಿದೆ. ಧರ್ಮಸ್ಥಳದ ಮೂಲಿವರ್ಗ ದುಮ್ಮರ್ಖಿಚಿಟ್ಟೆ ಪ್ರಕಾರದ ಸ್ಥಾನಿಕ ಲಿಂಗಯ್ಯನದ್ದು. ಇಲ್ಲಿ ಮಂಜುನಾಥೇಶ್ವರ ಹಿಂದೂ ದೇವಾಲಯ. ಇಲ್ಲಿಯ ಮುಕ್ತೇಸರರು ಜೈನ ಹೆಗ್ಗಡೆಯವರು. ಪೂಜೆಯು ಮಾಧ್ವ ಶಿವಳ್ಳಿಯವರ ಕೈಯಲ್ಲಿದೆ. ಈಗಲೂ ಧರ್ಮಸ್ಥಳದಲ್ಲಿ ದೇವಳಕ್ಕೆ ಸಂಬಂಧಿಸಿದ ನಾಲ್ಕು ಹೆಗ್ಗಡೆಗಳಿದ್ದಾರೆ. ಜೈನರಲ್ಲಿ ಒಬ್ಬರು (ಮುಖ್ಯ ಆಡಳಿತದಾರರು), ಸ್ಥಾನಿಕರಲ್ಲಿ ಒಬ್ಬರು, ಶಿವಳ್ಳಿಯವರಲ್ಲಿ ಒಬ್ಬರು ಮತ್ತು ಬಂಟರಲ್ಲಿ ಒಬ್ಬರು. ಅಲ್ಲಿಯ ಸ್ಥಾನಿಕ ಹೆಗ್ಗಡೆಯು ಜೈನ ಹೆಗ್ಗಡೆಯರಂತೆ ರುಮಾಲು ಕಟ್ಟಬೇಕು. ಇವರಿಗೆ ದೇಲಂಪಾಡಿ ಎಂಬ ಹೆಸರಿದೆ. ಇವರು ಭಕ್ತರಿಂದ ಹಣ್ಣುಕಾಯಿ ತೆಗೆದುಕೊಂಡು, ಅವರ ಹಾಲಾವಲೆಯನ್ನು ಮುಖ್ಯ ಜೈನ ಹೆಗ್ಗಡೆಯವರಿಗೆ ಹೇಳಿ, ಅವರ ತೀರ್ಪನ್ನು ಭಕ್ತರಿಗೆ ತಿಳಿಸಿ ಅವರಿಂದ ಕಾಣಿಕೆ ಹಾಕಿಸಿ, ಪ್ರಸಾದವನ್ನು ಅರ್ಚಕರಿಂದ ತೆಗೆದುಕೊಂಡು ಬಂದು ಭಕ್ತರಿಗೆ ಒಳ್ಳೆತನವನ್ನು ಬಯಸುವುದು. ಇದರಿಂದ ತಿಳಿಯಬಹುದಾದ ವಿಷಯವೇನೆಂದರೆ ಧರ್ಮಸ್ಥಳವು ಒಂದು ಕಾಲದಲ್ಲಿ ಸ್ಥಾನಿಕರದ್ದೇ ಆಗಿತ್ತೆಂಬುದು, ಇಲ್ಲಿಯ ಮುಂಚಿನ ಸ್ಥಳವಂದಿಗರು ಪುತ್ತೂರು ನಟ್ಟೋಜ ಮನೆತನದವರಾಗಿರಬೇಕು. ಇಲ್ಲಿಯವರಿಗೂ, ನಟ್ಟೋಜರಿಗೂ ಭಿನ್ನಾಭಿಪ್ರಾಯದಿಂದ ದೇವರ ಮೇಲಿನ 'ಆಣೆ' ಇದ್ದುದರಿಂದ ಈಗಲೂ ಧರ್ಮಸ್ಥಳಕ್ಕೆ ನಟ್ಟೋಜ ಮನೆಯವರು ಹೋಗುವುದಿಲ್ಲವೆಂದಿದೆ.

ಟಿಪ್ಪುವಿಗೆ ವಿರೋಧವಾಗಿ ಬ್ರಿಟಿಷರಿಗೆ ಸಹಾಯವಿತ್ತ ಕುಮಾರ ಹೆಗ್ಗಡೆ ಎಂಬವನಿಗೆ ಬ್ರಿಟಿಷರು ಇಲ್ಲಿಯ ಆಡಳಿತೆಯನ್ನು ಬಿಟ್ಟಿದ್ದಾಗಿ ತಿಳಿದು ಬರುತ್ತದೆ. ಈ ಸ್ಥಳಕ್ಕೆ ಹಿಂದಿನ ಹೆಸರು ಕಡುಮವೆಂದು. ಈ ಧರ್ಮಸ್ಥಳದ ಮೂಲಿಗರ ಒಂದು ಪಾಲಿನವರು ಮಂಗಳೂರಿನ ಕದಳಿವನ ಅಂದರೆ ಈಗನ ಕದ್ರಿ ಎಂಬಲ್ಲಿ ನೆಲೆಸಿ ಇಲ್ಲಿ ಮಂಜುನಾಥೇಶ್ವರನನ್ನು ಪ್ರತಿಷ್ಠಿಸಿದರು ಎಂಬ ಪ್ರತೀತಿ.

ಸ್ಥಾನಿಕರ ಯಾ ತುಳು ಶಿವ ಬ್ರಾಹ್ಮಣರ ಸಂಖ್ಯೆ ಇತರ ಬ್ರಾಹ್ಮಣರಾದ ಅಹಿಚ್ಛತ್ರ ಬ್ರಾಹ್ಮಣರಿಗಿಂತ ಕಡಿಮೆ ಆದುದರಿಂದ ಸ್ಥಾನಿಕರ ಅರ್ಚಕತನವು ಹೆಚ್ಚಿನ ದೇವಾಲಯಗಳಲ್ಲಿ ತಪ್ಪಿಹೋಯಿತು. ಇದರಿಂದ ಪೂಜೆಯು ಕೋಟ, ಶಿವಳ್ಳಿಯವರ ವಶವಾಯಿತು. ಬ್ರಾಹ್ಮಣೇತರರ ಮಟ್ಟಿಗೆ ಅರ್ಚಕ ಪರಿಚಾರಕರೆಂಬ ಕರ್ತವ್ಯದಲ್ಲಿ ಭೇದ ಕಂಡು ಮೇಲು ಕೀಳೆಂಬ ಭಾವನೆ ಉತ್ಪನ್ನವಾದುದಷ್ಟೆ ವಿನಾ ದೇವಳದಲ್ಲಿ ಕೆಲಸ ಮಾಡುವವರು ಎಲ್ಲರೂ ದೇವರ ಕೆಲಸದವರಾಗಿದ್ದಾರೆ. ಈ ಭಾವನೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಇದ್ದುದು ಭಿನ್ನಭಾವಕ್ಕೆ ಕಾರಣವಾಯಿತೆನ್ನಬೇಕು. ತಮಿಳುನಾಡಿನಲ್ಲಿ ಎಂದರೆ ಚಿದಂಬರಂ, ತಿರನಲ್ವೆಲ್ಲಿ, ಮಧುರೈ ಇತ್ಯಾದಿ ಈ ಪ್ರದೇಶಗಳಲ್ಲಿ ಸಂಬಳ ತೆಗೆದುಕೊಂಡು ಪೂಜೆ ಮಾಡುವವರು ನಿಷಿದ್ಧರು ಆಗಿದ್ದು. ದೇವಳದ ಪರಿಚಾರಕರಾಗಿರುವ ಅಯ್ಯರ್ ಬ್ರಾಹ್ಮಣರೇ ಶ್ರೇಷ್ಠರಾಗಿ ಇರುವರು. ಅಲ್ಲಿ ಅವರೇ ವೇದಾಧಿಕಾರಿಗಳಾಗಿದ್ದು ಪೂಜೆ, ಮಾಡುವವರು, ಆಗಮ ಮಾತ್ರ ಓದುವವರಾಗಿದ್ದಾರೆ. ಅಡ್ಡ, ನೀಟ ಪಂಜ್ತಿ ಎಂಬ ವಿಚಾರ ಅಲ್ಲಿ ಯಾ ಇತರ ಯಾವ ಕಡೆಯಲ್ಲೂ ಕಂಡು ಬರುವುದಿಲ್ಲ. ಈ ಪದ್ಧತಿಯು (ಸ್ಥಾನಿಕರಿಗೆ ಅಡ್ಡ ಪಂಜ್ತಿಯೆಂಬುದು) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಪ್ರಚಲಿತವಿದ್ದು ಅದು ಇಲ್ಲಿನ ಬ್ರಾಹ್ಮಣ ಜಾತಿಯ ಆಂತರಿಕ ಸಂಘರ್ಷಗಳ ಪರಿಣಾಮವೆನ್ನಬಹುದು. ಆದರೆ ಹವಿಕರು ಮಾತ್ರ ಸ್ಥಾನಿಕರ ದೇವಳವನ್ನು ನಮ್ಮ ಜಿಲ್ಲೆಯ ಮಂಗಳೂರು, ಪುತ್ತೂರು, ಕಾಸರಗೋಡು, ಯಾ ಉಡುಪಿ ತಾಲೂಕುಗಳಲ್ಲಿ ಆಕ್ರಮಿಸಿದ್ದು ಹೆಚ್ಚು ಕಂಡುಬರುವುದಿಲ್ಲ. ಈ ಸ್ಥಾನಿಕ ತುಳುವರ ಯಾ ಸ್ಥಾನಿಕರಲ್ಲಿ ಕನ್ನಡ ಮಾತನಾಡುವ ಕನ್ನಡಿಗರ ಗುಂಪುಗಳೊಳಗೆ ಮಾತ್ರ ವಿಶೇಷ ತಾರತಮ್ಯ ಬಂತು. ಈ ರೀತಿಯ ತಾರತಮ್ಯ ಮೊದಮೊದಲು ಹವೀಕ–ಕಾರಡ ಬ್ರಾಹ್ಮಣರ ಬಗೆಗೂ ಅನ್ವಯಿಸುತ್ತಿದ್ದು ಕ್ರಮೇಣ ಸ್ಥಾನಿಕರ ಮಟ್ಟಿಗೆ ಮಾತ್ರ ಅದು ನೆಲೆಯಾಗಿ ನಿಂತಂತೆ ಕಾಣುತ್ತದೆ.

(ಮುಂದುವರಿಯುವುದು)

## ಉಡುಪಿ ಅಜ್ಜರಕಾಡು ಪ್ರೌಢಶಾಲೆ : ಶ್ರೀ ಮ.ನಾ.ಹೆಬ್ಬಾರರಿಂದ ಕಾವ್ಯವಾಚನ

ಮಾರ್ಚ್ 4ರಂದು ಅಪರಾಹ್ನ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ಉಡುಪಿ ಅಜ್ಜರಕಾಡು ಸರಕಾರಿ ಪ್ರೌಢಶಾಲೆಯಲ್ಲಿ ಗಮಕಿ ಶ್ರೀ ಮ.ನಾ.ಹೆಬ್ಬಾರರಿಂದ ಗದುಗು ಭಾರತದ 'ಕರ್ಣಭೇದನ' ಕಥಾಭಾಗದ ಕಾವ್ಯವಾಚನವು ನೆರವೇರಿತು. ನಿವೃತ್ತ ಅಧ್ಯಾಪಕರಾದ ಶ್ರೀ ಬಿ. ನಾಗೇಶರಾವ್‌ರವರು ಕಾವ್ಯವಾಚನಕ್ಕೆ ವ್ಯಾಖ್ಯಾನವನ್ನಿತ್ತು ಸಹಕರಿಸಿದರು.

## ನಿಧನ

### ಪ್ರೊ। ಅರವಿಂದ ಜೋಷಿ



ಮುಲ್ಕಿ ವಿಜಯಾ ಕಾಲೇಜಿನ ಪ್ರಾಂಶುಪಾಲರಾಗಿದ್ದ ಪ್ರೊ। ಅರವಿಂದ ಜೋಷಿಯವರು ತಾ.06–03–2011ರಂದು ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕು ನಾಗತಿಹಳ್ಳಿಯಲ್ಲಿ ನಡೆದ ರಸ್ತೆ ಅಪಘಾತದಲ್ಲಿ ತೀರಿಕೊಂಡರು. ಇವರಿಗೆ 53 ವರ್ಷ ಪ್ರಾಯವಾಗಿದ್ದು ಉಪನ್ಯಾಸಕಿ ಪತ್ನಿ ವನಿತಾ ಜೋಷಿ ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಇವರು ಮೂಲತಃ ಕುಂಬಳೆ ಸಮೀಪದ ಶಿರಿಯದವರಾಗಿದ್ದು 15 ವರುಷಗಳಿಂದ ಮುಲ್ಕಿ ವಿಜಯಾ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಬಳಿಕ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದರು. ಈ ಉತ್ಸಾಹಿ ಮತ್ತು ಪ್ರತಿಭಾವಂತ ಪ್ರೊ। ಅರವಿಂದ ಜೋಷಿಯವರ ನಿಧನಕ್ಕೆ ಅವರ ಅಪಾರ ವಿದ್ಯಾರ್ಥಿ ಸಮೂಹ ಮತ್ತು ಸಾರ್ವಜನಿಕರು ಶ್ರದ್ಧಾಂಜಲಿ ಸಲ್ಲಿಸಿ ತಮ್ಮ ಗೌರವವನ್ನು ಸೂಚಿಸಿದರು.

## ಸ್ಥಿರ ದೂರವಾಣಿ ಸಂಖ್ಯೆ ಬದಲಾವಣೆ

ಉಡುಪಿ ಪುತ್ತೂರಿನಲ್ಲಿರುವ ಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ಸ್ಥಿರ ದೂರವಾಣಿ ಸಂಖ್ಯೆ ಈ ರೀತಿಯಾಗಿದೆ 0820–2580258

## ನಗೆಹನಿ

### ಹೆಸರು

ಫಸ್ಟ್ ಸ್ಟಾಂಡರ್ಡ್‌ನ ವಿದ್ಯಾರ್ಥಿಯೋರ್ವನನ್ನು ಟೀಚರ್ ಕೇಳಿದರು–"ನಿನ್ನ ಡ್ಯಾಡಿ ಮತ್ತು ಮಮ್ಮಿಯ ಹೆಸರೇನು?"
ವಿದ್ಯಾರ್ಥಿ ಉತ್ತರಿಸಿದ :
"ಅವರಿಬ್ಬರಿಗೂ ಒಂದೇ ಹೆಸರು ಮಿಸ್"
"ಅದು ಹೇಗೆ ಸಾಧ್ಯ? ಹಾಗಿದ್ದರೆ ಅವರ ಹೆಸರು ಹೇಳು ನೋಡೋಣ"
"ಡಾರ್ಲಿಂಗ್ ಅಂತ!"

### ಕಡ್ಡಿ–ಕೊಡೆ

ಒಬ್ಬ– ಅವರದು ಬಲು ಅಪರೂಪದ ಜೋಡಿ
ಮತ್ತೊಬ್ಬ– ಹೌದೆ? ಕಾರಣ?
ಒಬ್ಬ– ಕಾರಣವಿಷ್ಟೆ, ಆತ ಕೊಡೆಯ ಒಂದು ಕಡ್ಡಿಯಂತಿದ್ದಾನೆ. ಆದರೆ ಆತನ ಹೆಂಡತಿ ಬಿಡಿಸಿಟ್ಟ ಕೊಡೆಯಂತಿದ್ದಾಳೆ.

ಸಂಗ್ರಹ : MNS

## ಚುಟುಕಗಳು

### ವಂದನ

ಅವಳದು ಹೆಸರು ನಂದನ
ನಮ್ಮದು ಪ್ರೇಮ ಬಂಧನ
ಸದಾ ಇರಲಿ ಮನಸುಗಳ ಸ್ಪಂದನ
ಮುಂದುವರಿಯಲಿ ನಮ್ಮ ಪ್ರೇಮ ಕಥನ

### ಅಧರ

ಬಹಳ ಮಧುರ ನಿನ್ನ ಅಧರ
ಸದಾ ಇರಲಿ ಇದು ಮಧುರ
ಬಾರದಿರಲಿ ನಮ್ಮಲಿ ಪ್ರೇಮ ಅಂತರ
ಬಾಡದಿರಲಿ ಅನವರತ ಈ ಬಂದುರ

### ಉಷೆ

ಬೆಳಿಗ್ಗೆ ಎದ್ದು ನೋಡಿದರೆ ಅಲ್ಲಿ ಉಷೆ
ನನಗೆ ಅವಳದೇ ನಷೆ
ನೀಗಿಸುವಳು ಜೀವನದ ತೃಷೆ
ತೋರಿಸುವಳು ಸಂಸಾರದ ದೀಷೆ

– ವೈ. ಎ. ರಾವ್

## ಕೃತಜ್ಞತೆಗಳು

ತಾ.11-03-2011ರಂದು ಶುಕ್ರವಾರ ನಡೆದ ಉಡುಪಿಯ ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)ಯ ಮುಂದಿನ 5 ಸಹಕಾರಿ ವರ್ಷದ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಕ್ಕೆ ನಮ್ಮನ್ನು ಆಯ್ಕೆ ಮಾಡಿದ ಸರ್ವಸದಸ್ಯ ಬಂಧುಗಳಿಗೆ ಹಾಗೂ ಎಲ್ಲಾ ರೀತಿಯಿಂದಲೂ ನಮ್ಮೊಂದಿಗೆ ಸಹಕರಿಸಿದ ಸಮಾಜಬಾಂಧವರಿಗೂ ಹೃತ್ಪೂರ್ವಕ ಕೃತಜ್ಞತೆಗಳು

**ಶ್ರೀ ಸದಾನಂದ ರಾವ್ ಎಮ್., ಶ್ರೀ ಪ್ರಫುಲ್ಲ ಚಂದ್ರ ಯು., ಶ್ರೀ ಯು.ಅರವಿಂದ ಕುಮಾರ್, ಶ್ರೀ ಮುರಳೀಕೃಷ್ಣ ರಾವ್ ವೈ, ಶ್ರೀ ಪ್ರಕಾಶ ಕುಮಾರ ವೈ, ಶ್ರೀ ವೇಣುಗೋಪಾಲ ರಾವ್ ಕೆ., ಶ್ರೀ ಮಂಜುನಾಥ ಹೆಬ್ಬಾರ್ ಕೆ., ಗೀತಾ ಕೃಷ್ಣಕುಮಾರ್ (ಅವಿರೋಧ ಆಯ್ಕೆ)**

## ಪುಣ್ಯಸ್ಮರಣೆ

15-07-1926



01-04-2010

ಕೇದಿಗೆ ಭಾಸ್ಕರ ರಾವ್

**ನಮ್ಮೆಲ್ಲರನ್ನು ಪ್ರೀತಿ ವಾತ್ಸಲ್ಯದಿಂದ ಸಲಹಿ ಉತ್ತಮ ಮಾರ್ಗದರ್ಶನಗೈದ ನಿಮ್ಮ ನೆನಪು ಸದಾ ಹಸಿರು.**

ಲಕ್ಷ್ಮೀ ಭಾಸ್ಕರ ರಾವ್ (ಪತ್ನಿ)
ಗಾಯತ್ರಿ ಮತ್ತು ಡಾ. ಕೇದಿಗೆ ಅರವಿಂದ ರಾವ್
ರೂಪ ರಾಣಿ ಮತ್ತು ಕೇದಿಗೆ ವಸಂತ ರಾವ್
ರೇಖಾ ಮತ್ತು ಕೆ. ಜಯಂತ್ ರಾವ್
ರೇಖಾ ಮತ್ತು ರಾಜೇಂದ್ರ ಕೇದಿಗೆ
ಜ್ಯೋತಿ ಮತ್ತು ಕೆ. ಪ್ರತಾಪ್ ರಾವ್
ಗಾಯತ್ರಿ ಮತ್ತು ಸುಂದರೇಶ್ ಶರ್ಮ, ಬೆಂಗಳೂರು
ಕಮಲಜ ಮತ್ತು ರಾಜಶೇಖರ್, ಮೈಸೂರು
ಶಕುಂತಳ ಮತ್ತು ಡಾ. ಯಾಜಿ. ನಿರಂಜನ್ ಹೆಚ್. ಉಡುಪಿ
ರಾಜೇಶ್ವರಿ ಮತ್ತು ರಮಾನಂದ ರಾವ್, ಕುಡುಪು
ಮೊಮ್ಮಕ್ಕಳು ಮತ್ತು ಮರಿಮಕ್ಕಳು

## ಮಾಂಗಲ್ಯಂ ತಂತುನಾನೇನ ....

ಶ್ರೀಮತಿ ಮತ್ತು ಶ್ರೀ ಕರಣಿಕ ರಾಧಾಕೃಷ್ಣರ ಪುತ್ರಿ **ರಶ್ಮಿ** ಹಾಗೂ ಶ್ರೀ ಹೆಚ್. ಸೂರ್ಯಪ್ರಕಾಶ್ ರಾವ್‌ರವರ ಪುತ್ರ **ಕೋದಂಡರಾಮ** ಇವರ ವಿವಾಹವು ತಾ.07-03-2011 ರಂದು ಸುಳ್ಯದ ಅಕ್ಷತಾ ಕಲಾಮಂದಿರದಲ್ಲಿ ನೆರವೇರಿತು.

★★★ ★★★

ಶ್ರೀಮತಿ ವಿಜಯಾ ಮತ್ತು ಶ್ರೀ ತ್ರಿಶೂಲೇಶ್ವರ ಜಯರಾಮ ರಾಯರ ಪುತ್ರ **ಪ್ರಮೋದ್ ಕುಮಾರ್** ಹಾಗೂ ಶ್ರೀಮತಿ ಜಯಶ್ರೀ ಮತ್ತು ಶ್ರೀ ನಂದಾವರ ಕೌಳಿಗೆ ಸುರೇಶ ರಾಯರ ಪುತ್ರಿ **ದೀಪ್ತಿ** ಇವರ ವಿವಾಹವು ತಾ.23-02-2011 ರಂದು ಮಂಗಳೂರು ಬಿಜೈ ರಸ್ತೆಯಲ್ಲಿರುವ ಶ್ರೀ ಸುಬ್ರಹ್ಮಣ್ಯ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಮೀರಾ ಮತ್ತು ಅಜಾರು ಶ್ರೀ ರಾಜಾರಾಮರಾಯರ ಪುತ್ರಿ **ಶ್ರೀವಿದ್ಯಾ** ಹಾಗೂ ಶ್ರೀಮತಿ ಮತ್ತು ಶಿರ್ತಾಡಿ ಮುರಲೀಧರ ರಾಯರ ಪುತ್ರ **ಶಶಿಧರ** ಇವರ ವಿವಾಹವು ತಾ.07-03-2011 ರಂದು ಕಟೀಲು ಶ್ರೀನಿಕೇತನ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಮತ್ತು ಶ್ರೀ ಯು. ಆರ್. ವಾಸುದೇವ ರಾಯರ ಪುತ್ರ **ನಿರಂಜನ** ಹಾಗೂ ಶ್ರೀಮತಿ ಮತ್ತು ಶ್ರೀ ಬಿ. ಬಾಲಚಂದ್ರರಾಯರ ಪುತ್ರಿ **ಪಲ್ಲವಿ** ಇವರ ವಿವಾಹವು ತಾ.09-03-2011 ರಂದು ಶ್ರೀ ಕ್ಷೇತ್ರ ಧರ್ಮಸ್ಥಳದ ಮಹೋತ್ಸವ ಸಭಾಭವನದಲ್ಲಿ ನೆರವೇರಿತು. ಆರತಕ್ಷತೆಯು ಮರುದಿನ ತಾ.10-03-2011ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಕಲ್ಯಾಣ ಮಂಟಪದಲ್ಲಿ ಶ್ರೀಸತ್ಯನಾರಾಯಣ ಪೂಜೆಯೊಂದಿಗೆ ನೆರವೇರಿತು.

★★★ ★★★

ಕಾರ್ಕಡ-ಸಾಲಿಗ್ರಾಮದ ಶ್ರೀಮತಿ ಮತ್ತು ಶ್ರೀ ಪುರುಷೋತಮ ಹೆಬ್ಬಾರರ ಪುತ್ರಿ **ಉಷಾ** ಹಾಗೂ ಕದ್ರಿ ಮಂಗೆಳೂರಿನ ಶ್ರೀಮತಿ ಮತ್ತು ಶ್ರೀ ಡಾ। ರಾಧಾಕೃಷ್ಣರಾವ್ ಇವರ ಪುತ್ರ **ಪ್ರಶಾಂತ್** ಇವರ ವಿವಾಹವು ತಾ.06-03-2011ರಂದು ಉಡುಪಿ ಪುತೂರು ಭಗವತೀ ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನದ "ಶ್ರೀ ಭಗವತೀ ಸಭಾಗೃಹ"ದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಶಶಿಕಲಾ ಮತ್ತು ಶ್ರೀ ಪಿ. ಶಂಕರ್‌ರಾವ್ ಇವರ ಪುತ್ರ **ಗಣೇಶ** ಹಾಗೂ ಶ್ರೀಮತಿ ಸುಕನ್ಯಾ ಮತ್ತು ಪಡುಬಿದ್ರಿಯ ಶ್ರೀ ಡಾ। ಕೆ. ಅರವಿಂದ ಶಾಸ್ತ್ರಿ ಇವರ ಪುತ್ರಿ **ಅಂಜಲಿ** ಇವರ ವಿವಾಹವು ತಾ.07-03-2011ರಂದು ಎರ್ಮಾಳು "ಶ್ರೀ ಜನಾರ್ದನ ಜನ ಕಲ್ಯಾಣ ಸಭಾಂಗಣ"ದಲ್ಲಿ ನೆರವೇರಿತು.

★★★ ★★★

ಕಾರೇಬೈಲು ಶ್ರೀಮತಿ ಗೀತಾ ಮತ್ತು ಶ್ರೀ ಕೆ. ಶಂಕರ್‌ರಾವ್ ಇವರ ಪುತ್ರ **ಉದಯ** ಹಾಗೂ ಮುಚ್ಚುಕೋಡು ದಿ। ರಾಧಾಕೃಷ್ಣ ರಾವ್ ಮತ್ತು ಶ್ರೀಮತಿ ಗೌರಿ ಇವರ ಪುತ್ರಿ **ಪೂರ್ಣಿಮಾ** ಇವರ ವಿವಾಹವು ತಾ.21-02-2011ರಂದು ಕುಂದಾಪುರ ತಾಲೂಕು ಶಂಕರನಾರಾಯಣದ "ವಿಪ್ರ ಭವನ"ದಲ್ಲಿ ನೆರವೇರಿತು.

## ಮೀನ ಮಾಸ ವಿಶೇಷ ದಿನಗಳು

| | |
|---|---|
| 14-03-2011 | **ಮೀನ ಸಂಕ್ರಮಣ** |
| 16-03-2011 | **ಸರ್ವೇಕಾದಶಿ** |
| 17-03-2011 | **ಪ್ರದೋಷಃ** |
| 18-03-2011 | **ಉತ್ತರಾಭಾದ್ರ ನಕ್ಷತ್ರಾರಂಭ** |
| 19-03-2011 | **ಪೂರ್ಣಿಮಾ** |
| 22-03-2011 | **ಸಂಕಷ್ಟಹರ ಚತುರ್ಥಿ** ಚಂದ್ರೋದಯ ಘಂಟೆ ರಾತ್ರಿ 9-30ಕ್ಕೆ |
| 30-03-2011 | **ಸರ್ವೇಕಾದಶಿ** |
| 31-03-2011 | **ಪ್ರದೋಷಃ, ರೇವತಿ ನಕ್ಷತ್ರಾರಂಭ** |
| 03-04-2011 | **ಅಮಾವಾಸ್ಯಾ** |
| 04-04-2011 | **ಚಂದ್ರಯುಗಾದಿ** |
| 14-04-2011 | **ಮೇಷ ಸಂಕ್ರಮಣ, ಸರ್ವೇಕಾದಶಿ, ಮಹಾನಕ್ಷತ್ರ ಅಶ್ವಿನಿ ಪ್ರಾರಂಭ** |

## ಅಭಿನಂದನೆ



### ಕರ್ವಾಲು ನವೀನ್ ಕುಮಾರ್ ರಾವ್

ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಬೆಳಗಾಮ್ ರೀಜನಲ್ ಕಛೇರಿಯಲ್ಲಿ ಮಾಹಿತಿ ತಂತ್ರಜ್ಞಾನ ವಿಭಾಗದಲ್ಲಿ ಪ್ರಬಂಧಕರಾಗಿ ಕೆಲಸ ಮಾಡುತ್ತಿದ್ದ ಕರ್ವಾಲು ನವೀನ್ ಕುಮಾರ್ ರಾವ್‌ರವರು ಮಾಹಿತಿ ತಂತ್ರಜ್ಞಾನ ವಿಭಾಗದ ಹಿರಿಯ ಪ್ರಬಂಧಕರಾಗಿ ಪದೋನ್ನತಿ ಹೊಂದಿ ಪ್ರಸಕ್ತ ಅದೇ ಕಛೇರಿಯಲ್ಲಿ ಉದ್ಯೋಗ ಮುಂದುವರಿಸಿದ್ದಾರೆ. ಶ್ರೀಯುತ ನವೀನ್‌ಕುಮಾರ್ ರವರಿಗೆ ಶ್ರೀಶಾರದಾ ಬಳಗದ ಶುಭ ಹಾರೈಕೆಗಳು.

## ವೈವಾಹಿಕ ಜೀವನದ 40ನೇ ವರ್ಷಾಚರಣೆ

ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿಯ ಸದಸ್ಯರು, ಹಿರಿಯ ಕಲಾವಿದ ಮತ್ತು ಹರಿದಾಸರಾದ ಶ್ರೀ ಮ.ನಾ.ಹೆಬ್ಬಾರರು ತಮ್ಮ ವಿವಾಹ ಜೀವನದ 40ನೇ ವಾರ್ಷಿಕೋತ್ಸವವನ್ನು ಶ್ರೀಶಾರದಾ ಮಂಟಪದಲ್ಲಿ ತಾ.14-02-2011ರಂದು ಫೆಬ್ರವರಿ ತಿಂಗಳ ಶಾರದಾ ಪತ್ರಿಕೆಯನ್ನು ಅಂಚೆಗೆ ರವಾನಿಸುವ ಸಂದರ್ಭದಲ್ಲಿ ಭೋಜನಕೂಟ ಏರ್ಪಡಿಸಿ ಆಚರಿಸಿದರು. ಶ್ರೀ ಮ.ನಾ.ಹೆಬ್ಬಾರ್ ದಂಪತಿಗಳಿಗೆ ಶ್ರೀಶಾರದಾ ಬಳಗದ ಶುಭ ಹಾರೈಕೆಗಳು.

## ವೈವಾಹಿಕ ಜೀವನದ ಬೆಳ್ಳಿಹಬ್ಬದ ಆಚರಣೆ

ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ ಇದರ ನಿರ್ದೇಶಕರಾದ ಶ್ರೀಯುತ ಉಲ್ಲಾಸ್ ರಾವ್‌ರವರು ತಮ್ಮ ವೈವಾಹಿಕ ಜೀವನದ ಬೆಳ್ಳಿಹಬ್ಬವನ್ನು ವಿಶಿಷ್ಟ ರೀತಿಯಲ್ಲಿ ತಾ.02-01-2011ರ ರವಿವಾರ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಆಚರಿಸಿದರು.

ಶ್ರೀಮತಿ ನಾಗವೇಣಿ ಮತ್ತು ಶ್ರೀ ಉಲ್ಲಾಸ್ ರಾವ್‌ರವರ ಬೆಳ್ಳಿಹಬ್ಬದ ಕಾರ್ಯಕ್ರಮವು ವೈದಿಕರಿಂದ ಬೆಳಿಗ್ಗೆ ಗಣಹೋಮ ಮಾಡುವುದರ ಮೂಲಕ ಪ್ರಾರಂಭವಾಯಿತು. ಸಂಘದ ಸದಸ್ಯೆಯರಿಂದ ಭಜನಾ ಕಾರ್ಯಕ್ರಮ, 10 ಗಂಟೆಗೆ ಚಂಡಿಕಾಯಾಗ, ಪ್ರಸಾದ ವಿತರಣೆ, ಮಧ್ಯಾಹ್ನ ಭೋಜನಕೂಟವನ್ನು ಏರ್ಪಡಿಸಲಾಯಿತು.

ಅಪರಾಹ್ನ 2-30ರಿಂದ ಸಮಾಜ ಬಾಂಧವರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿತು. ಕಾರ್ಯಕ್ರಮಕ್ಕೆ ಆಗಮಿಸಿದ ಕುಟುಂಬ ವರ್ಗದವರಿಗೂ, ಸಮಾಜ ಬಾಂಧವರಿಗೂ ಶ್ರೀಮತಿ ಮತ್ತು ಶ್ರೀ ಉಲ್ಲಾಸ್ ರಾವ್‌ರವರು ಕೃತಜ್ಞತೆಯನ್ನು ಅರ್ಪಿಸಿದರು. **- ಶ್ರೀನಿವಾಸ ಶರ್ಮ**

## ಶುಭ ಜನನ

ಬೆಂಗಳೂರಿನಲ್ಲಿರುವ ವೈ. ಚಿತರಂಜನ್‌ರಾವ್ (ಕುಕ್ಕಿಕಟ್ಟೆ ದಿ। ವೈ. ಚಂದ್ರಶೇಖರ ರಾವ್ ಮತ್ತು ಶ್ರೀಮತಿ ಇಂದಿರಾ ಬಾಯಿಯವರ ಪುತ್ರ) ಭಾನುಪ್ರಿಯಾ (ಚೈನ್ನೈನ ದಿ। ಬೆಳ್ಳೆ ರಾಮಚಂದ್ರ ರಾವ್ ಮತ್ತು ಶ್ರೀಮತಿ ನಿರ್ಮಲಾರವರ ಪುತ್ರಿ) ದಂಪತಿಗಳಿಗೆ ತಾ.19-01-2011ರಂದು ಹೆಣ್ಣು ಮಗುವಿನ ಜನನ.

★★★ ★★★

ಬೆಂಗಳೂರಿನಲ್ಲಿರುವ ಕಟಪಾಡಿ ಶ್ರೀ ಕೆ. ಸುರೇಶ್ ರಾವ್ ಮತ್ತು ಶ್ರೀಮತಿ ಸುಶೀಲಾ ಇವರಿಗೆ ತಾ.19-01-2011ರಂದು ಗಂಡು ಮಗುವಿನ ಜನನ.

### ಸಂತೋಷ್‌ಕುಮಾರ್ ಉಬರಳೆ

ಮುಂಬಯಿಯ ರಿಸರ್ವ್‌ಬ್ಯಾಂಕ್ ಆಫ್ ಇಂಡಿಯಾದ ಐ.ಟಿ. ವಿಭಾಗದಲ್ಲಿ ಎ.ಜಿ.ಎಮ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಸಂತೋಷ ಕುಮಾರ್ ಉಬರಳೆಯವರು ಸಿಂಗಾಪುರದಲ್ಲಿ ನಡೆಯುವ "World Bank Payment System"ನ ವಿಷಯ ಕುರಿತು ನಡೆಯುವ ವಿಶ್ವಬ್ಯಾಂಕ್ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಲು ತಾ.12-03-2011ರಂದು ಸಿಂಗಾಪುರಕ್ಕೆ ತೆರಳಿರುತ್ತಾರೆ. ಇವರಿಗೆ ಶ್ರೀಶಾರದಾ ಬಳಗದ ಶುಭಾಶಯಗಳು.

## ಗೃಹಪ್ರವೇಶ

### 'ಉದ್ಭವ್'

ಶ್ರೀಮತಿ ಮತ್ತು ಶ್ರೀ ಕೆ. ಸುಬ್ರಹ್ಮಣ್ಯರಾವ್ ರವರು ಅಲೆವೂರು ಜೋಡುರಸ್ತೆ ಶ್ರೀರಂಗನಗರದಲ್ಲಿ ನೂತನವಾಗಿ ಕಟ್ಟಿಸಿರುವ ಮನೆ 'ಉದ್ಭವ್' ಇದರ' ಗೃಹಪ್ರವೇಶೋತ್ಸವವನ್ನು ತಾ.16-2-11 ರಂದು ನೆರವೇರಿಸಿದರು.

## ಉಪನಯನ

### ಚಿ। ಸುಮಿತ್

ತಾ.20-02-2011ರಂದು ಶ್ರೀಮತಿ ಮತ್ತು ಶ್ರೀ ಕೆ.ಬಿ.ಸತೀಶ್ಚಂದ್ರ ಇವರ ಪುತ್ರ ಚಿ। ಸುಮಿತ್‌ನ ಬ್ರಹ್ಮೋಪದೇಶವು ಮಂಗಳೂರಿನ ಅಶೋಕನಗರದಲ್ಲಿರುವ ಗೋಕುಲ ಕಲ್ಯಾಣ ಮಂಟಪದಲ್ಲಿ ಜರಗಿತು.

## ಪಡುಬಿದ್ರಿ : ಸಹಸ್ರಮೋದಕ ಗಣಯಾಗ

ಪಡುಬಿದ್ರಿ ಶ್ರೀಕ್ಷೇತ್ರ ಉದಯಾದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಎಳ್ಳಮವಾಸ್ಯೆಯ ದಿನದಂದು ಸಹಸ್ರ ಮೋದಕ ಗಣಯಾಗ ಕಾರ್ಯಕ್ರಮವು ಜರಗಿತು. ಈ ಕಾರ್ಯಕ್ರಮಕ್ಕೆ ಊರವರು ಅಲ್ಲದೆ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಗಣಯಾಗ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**- ಶ್ರೀನಿವಾಸ ಶರ್ಮ**

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಪ್ರಶ್ನೆ: ನಿದ್ರಾಹೀನತೆ ಯಾಕಾಗುತ್ತದೆ? ಮತ್ತು ಅದರ ಚಿಕಿತ್ಸೆ ಏನು?** **ಡಾ। ವೈ. ಸುದರ್ಶನ ರಾವ್**

**ಉತ್ತರ:** ನಿದ್ರಿಸುವುದು ಎಂದರೆ ಪ್ರಜ್ಞೆ ಕಳೆದುಕೊಳ್ಳುವುದಕ್ಕೆ ಸಮ. ಆದರೆ ಈ ಪ್ರಜ್ಞೆಯು ತನ್ನಿಂತಾನಾಗೆ ಅಥವಾ ಎಚ್ಚರಿಸುವುದರ ಮೂಲಕ ಸುಲಭವಾಗಿ ಮರುಕಳಿಸಬಲ್ಲದು. ಪ್ರತಿಯೊಂದು ಜೀವಿಯು ನಿದ್ರಿಸುತ್ತದೆ. ಇದು ನರಮಂಡಲದೊಳಗೆ ಕಾಲಕಾಲಕ್ಕೆ ನಡೆಯುವ ಒಂದು ಪ್ರಕ್ರಿಯೆ. ಮನುಷ್ಯ ಎಚ್ಚರವಿದ್ದಷ್ಟು ಸಮಯ, ದೇಹ ವಿಶ್ರಾಂತಿಯಲ್ಲಿದ್ದರೂ, ನರಮಂಡಲವು ಕೆಲಮಾಡುತ್ತಿರುತ್ತದೆಂಬುದನ್ನು ಗಮನಿಸಬೇಕು. ಹೀಗೆ ದಣಿದ ನರಮಂಡಲಕ್ಕೆ ವಿಶ್ರಾಂತಿ ಕೊಡುವ ಕ್ರಿಯೆಯೇ ನಿದ್ರೆ. ದಣಿದಾಗಲೆಲ್ಲ ಮೆದುಳು ತಾನಾಗೆ ತನ್ನೊಳಗೆ ಕೆಲವು ರಾಸಾಯನಿಕ ಬದಲಾವಣೆಗಳು ಹಾಗೂ ಸಂದೇಶಗಳನ್ನು ಕಳಿಸುವುದರ ಮೂಲಕ ನಿದ್ರೆಗೆ ಜಾರುತ್ತದೆ. ನಿದ್ರೆಯ ನಂತರ ನರಮಂಡಲದ ಅಂಗಾಂಶಗಳು ತಮ್ಮ ಚೈತನ್ಯವನ್ನು ಮರಳಿ ಪಡೆಯುತ್ತವೆ. ನಿದ್ರೆ ಕಡಿಮೆಯಾದಾಗ ತಲೆ ನೋವು, ಸುಸ್ತು, ಮೈ ಕೈ ನೋವು, ಜಡತ್ವ ಇತ್ಯಾದಿಗಳು ಎಲ್ಲರ ಅನುಭವಕ್ಕೆ ಬಂದಿರುವಂತಹಾ ತೊಂದರೆಗಳು. ಹಾಗೆಯೇ ಸರಿಯಾಗಿ ನಿದ್ರೆ ಮಾಡಿರದಿದ್ದರೆ ಸುಲಭವಾಗಿ ಸಿಟ್ಟಿಗೇಳುವುದು, ಪರಿಸ್ಥಿತಿಯನ್ನು ತಪ್ಪಾಗಿ ಗ್ರಹಿಸುವುದು. ತಪ್ಪು ನಿರ್ಧಾರ ತೆಗೆದುಕೊಳ್ಳುವುದೇ ಮುಂತಾಗಿ ದಿನನಿತ್ಯದ ಕೆಲಸದಲ್ಲಿ ಪರಿಣಾಮ ಬೀರುತ್ತದೆ. ಸುಮಾರು 100 ಗಂಟೆ ಕಾಲ ಸತತವಾಗಿ ನಿದ್ರಿಸದಿದ್ದಲ್ಲಿ ಮನುಷ್ಯನು ಹುಚ್ಚನಂತೆ ವರ್ತಿಸುವನು.

ಸಣ್ಣ ಮಕ್ಕಳು ಅತೀ ಹೆಚ್ಚು ನಿದ್ರಿಸಿದರೆ ಯೌವನದಲ್ಲಿ ಸುಮಾರು ಎಂಟು ಗಂಟೆಗಳ ನಿದ್ರೆ ಅಗತ್ಯವಿದೆ. ವಯಸ್ಸಾದಂತೆ ನಿದ್ರಿಸುವ ಅವಧಿ ಕಡಿಮೆಯಾಗುತ್ತಾ ಹೋಗುತ್ತದೆ. ವ್ಯಕ್ತಿಯಿಂದ ವ್ಯಕ್ತಿಗೆ ನಿದ್ರಿಸುವ ಅವಧಿಯಲ್ಲಿ ಬದಲಾವಣೆ ಇದೆ. ಕೆಲವರು ಹೆಚ್ಚು, ಇನ್ನು ಕೆಲವರು ಕಡಿಮೆ ಅವಧಿ ನಿದ್ರಿಸಬಹುದು. ನಿದ್ರೆಯ ನಂತರ ಮನಸ್ಸು ಪ್ರಫುಲ್ಲವಾಗಿರುವುದು. ದೇಹದಲ್ಲಿ ಶಕ್ತಿ ಚೈತನ್ಯ ತುಂಬಿರುವುದು, ಕಡಿಮೆ ಅವಧಿಯದ್ದಾಗಿದ್ದರೂ, ಸಾಕಷ್ಟು ನಿದ್ರೆ ಮಾಡಿರುವುದರ ಸೂಚನೆ.

ನಿದ್ರೆ ಬರಬೇಕಾದರೆ ಮುಂಚೆ ಸಾಕಷ್ಟು ಕಾಲ ಎಚ್ಚರವಿದ್ದು ನರಮಂಡಲ ದಣಿದಿರಬೇಕು. ನಿಶ್ಶಬ್ದವಾದ, ಕತ್ತಲಿನ ಹಾಗೂ ಹಿತವಾದ ವಾತಾವರಣವಿರಬೇಕು (ಅದಕ್ಕಾಗಿಯೇ ನಿದ್ರಿಸಬೇಕಾದರೆ ಕೋಣೆಯೊಳಗೆ ಫ್ಯಾನು ಅಥವಾ ಎ.ಸಿ.ಯ ಕೆಳಗೆ ಮೆದುವಾದ ಹಾಸಿಗೆಯಲ್ಲಿ ಕಣ್ಣುಮುಚ್ಚಿ ಹೊದ್ದು ಮಲಗುವುದು ಕ್ರಮವಲ್ಲವೇ) ಹಾಗೂ ಮನಸ್ಸು ನಿದ್ರೆಯನ್ನು ಬಯಸಬೇಕು. ಹಾಗಿದ್ದರೆ ಮಾತ್ರ ನಿದ್ರಿಸಲು ಸಾಧ್ಯ.

ಕೆಲವರಿಗೆ ನಿದ್ರೆ ಬರದಿರುವುದೊಂದು ಸಮಸ್ಯೆ. ಮೊದಲೇ ಹೇಳಿದಂತೆ ಮಾಡಿದ ನಿದ್ರೆ ಕಡಿಮೆ ಅವಧಿಯದ್ದಾದರೂ ನಿದ್ರೆಯ ನಂತರ ಮನಸ್ಸು ದೇಹಗಳೆರಡೂ ಉಲ್ಲಸಿತವಾಗಿದ್ದರೆ ತಾನು ಕಡಿಮೆ ನಿದ್ರೆ ಮಾಡಿರುವೆನೆಂಬ ಚಿಂತೆ ಬೇಡ. (ಅವರು ಹೆಚ್ಚಿಗೆ ಸಿಕ್ಕಿದ 'ಎಚ್ಚರವಿರುವಂತಹಾ ಸಮಯ'ವನ್ನು ಉಪಯುಕ್ತ ಕೆಲಸಗಳಿಗೆ ಉಪಯೋಗಿಸಬಹುದು)

ಜ್ವರ, ನೋವು, ಉಬ್ಬಸ ಇತ್ಯಾದಿ ಕಾಯಿಲೆಗಳಿದ್ದರೆ ನಿದ್ರಾಭಂಗವಾಗುವುದು ಸಹಜ. ಭಯ, ಖಿನ್ನತೆ ಉದ್ವೇಗ, ಇತ್ಯಾದಿ ಮಾನಸಿಕ ತೊಂದರೆಗಳಿದ್ದಾಗ ನಿದ್ರೆಬಾರದು. ಅತಿಯಾದ ಸಂತೋಷ, ಉನ್ಮಾದಗಳಿದ್ದರೂ ನಿದ್ರೆ ಹತ್ತಿರ ಬರುವುದಿಲ್ಲ. ಕೆಲವೊಮ್ಮೆ ಸ್ವಲ್ಪವೂ ನಿದ್ರೆ ಮಾಡದಿರುವುದೇ ಮಾನಸಿಕ ಖಾಯಿಲೆಯೊಂದರ ಪ್ರಥಮ ಚಿಹ್ನೆಯಾಗಿರುತ್ತದೆ. ಕೆಲವು ಔಷಧಿಗಳ ಪರಿಣಾಮವಾಗಿಯೂ ನಿದ್ರೆ ಬರದಿರಬಹುದು.

ವಯಸ್ಸಾದವರಲ್ಲಿ ನಿದ್ರೆ ಬರದಿರುವುದು ಅತೀ ಸಾಮಾನ್ಯ. ಅದಕ್ಕೆ ಕಾರಣವೇನೆಂದರೆ ಅವರಲ್ಲಿ ನರಮಂಡಲವು ನಿದ್ರೆ ಬಯಸುವ ಅವಧಿ ಕಡಿಮೆಯಾಗಿರುತ್ತದೆ. ಇನ್ನು ಕೆಲವರು ವೃದ್ಧಾಪ್ಯದ ದೆಸೆಯಿಂದ ಹಾಸಿಗೆಯಲ್ಲೇ ದಿನದ ಹೆಚ್ಚಿನ ಸಮಯ ಕಳೆದು ಪದೇ ಪದೇ ಸಣ್ಣ ನಿದ್ರೆ ಮಾಡುತ್ತಿರುತ್ತಾರೆ. ಹಾಗಾಗಿ ರಾತ್ರಿ ದೀರ್ಘ ನಿದ್ರೆ ಬರುವುದಿಲ್ಲ. ಅವರು ನರಳುತ್ತಿರುವ ಖಾಯಿಲೆಗಳಿಂದಲೂ, ಅವುಗಳ ಔಷಧಿಗಳಿಂದಲೂ ನಿದ್ರೆ ಬಾರದಿರಬಹುದು. ಹೆಚ್ಚಿನವರಲ್ಲಿ ರಾತ್ರಿ ನಿದ್ರೆ ಬರದಿರುವದಕ್ಕಿಂತ ಎಚ್ಚರವಿರುವ ಸಮಯವನ್ನು ಕಳೆಯುವುದೇ ಸಮಸ್ಯೆಯಾಗಿರುತ್ತದೆ.

ನಿದ್ದೆ ಬಾರದಿರುವವರಿಗೆ ನಿದ್ರೆ ಬರಿಸಲು ಕೆಲವು ಸೂಚನೆಗಳು

ನಿದ್ರಿಸಲು ಪೂರಕ ವಾತಾವರಣ (ನಿಶ್ಶಬ್ದ, ಕತ್ತಲಿನ ಹಿತವಾದ)ವನ್ನು ಸೃಷ್ಟಿಸಿಕೊಳ್ಳಿರಿ

ನಿದ್ರಿಸುವ ಮುಂಚೆ ಓದುವುದು, ಟಿ.ವಿ. ನೋಡುವುದರಿಂದ ಮೆದುಳು ದಣಿದು ನಿದ್ರೆಯನ್ನು ಬಯಸುತ್ತದೆ.

ಮನಸ್ಸಿನ ಉದ್ವೇಗ, ಉನ್ಮಾದ, ಉದ್ರೇಕಗಳನ್ನು ಹತೋಟಿಯಲ್ಲಿಡಿ

ರಾತ್ರಿ ಮಾತ್ರ ನಿದ್ರಿಸಿರಿ

ದೈಹಿಕ ಹಾಗೂ ಮಾನಸಿಕ ಖಾಯಿಲೆಗಳಿಗೆ ಸೂಕ್ತ ಚಿಕಿತ್ಸೆ ಮಾಡಿಕೊಳ್ಳಿರಿ ಹಾಗೂ ಈ ಔಷಧಿಗಳಿಂದ ನಿದ್ರೆಯ ಮೇಲೆ ಪರಿಣಾಮವಿದೆಯೇ ಎಂದು ವಿಚಾರಿಸಿರಿ.

ಖಾಲಿ ಹೊಟ್ಟೆಯಲ್ಲಿ ನಿದ್ದೆ ಬರುವುದಿಲ್ಲ. ನಡುರಾತ್ರಿ ನಿದ್ದೆಯ ಮಧ್ಯೆ ಎಚ್ಚರವಾದರೆ ಹೊಟ್ಟೆಗೇನಾದರೂ ತಿಂದರೆ ನಿದ್ರೆ ಬರುತ್ತದೆ. ಇನ್ನೂ ನಿದ್ರೆ ಬಾರದಿದ್ದರೆ ವೈದ್ಯರ ಸಲಹೆ ಮೇರೆಗೆ ನಿದ್ರೆಯ ಔಷಧಿಗಳ ಮೊರೆ ಹೋಗಬಹುದು.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322**

# ಶ್ರೀ ಸುಬ್ರಹ್ಮಣ್ಯ ಸಭಾ (ರಿ.) ಮಂಗಳೂರು

## ಪ್ರಕಟಣೆ

ಶ್ರೀಯುತ ಕೂಡ್ಲು ವಿಷ್ಣು ಶ್ಯಾನುಭಾಗರು ತಮ್ಮ ಪತ್ನಿ ದಿ| ಶ್ರೀಮತಿ ಕೂಡ್ಲ ಪ್ರೇಮಾವತಿ ಅಮ್ಮ ಇವರ ಸ್ಮರಣಾರ್ಥ ರೂ.70,000/-ದ ದತ್ತಿನಿಧಿಯನ್ನು ಸ್ಥಾಪಿಸಿರುವರು. 2010-11ನೇ ಸಾಲಿಗೆ ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ನಮ್ಮ ಸಮಾಜದ ಆರ್ಥಿಕವಾಗಿ ಹಿಂದುಳಿದ ಕುಟುಂಬದಿಂದ ಬಂದ ಒಬ್ಬ ವಿದ್ಯಾರ್ಥಿಗೆ ರೂ.5,000/- ಸಹಾಯಧನವನ್ನು ಕೊಡಲು ಅವರು ಬಯಸಿರುವರು.

ವೈದ್ಯಕೀಯ ಶಿಕ್ಷಣವನ್ನು ಪಡೆಯುವ ಸಮಾಜದ ವಿದ್ಯಾರ್ಥಿಗಳು ಈ ಸಹಾಯ ಧನಕ್ಕಾಗಿ ದಿನಾಂಕ 30-03-2011ರ ಒಳಗೆ ತಲುಪುವಂತೆ ಅರ್ಜಿಯನ್ನು ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಮಂಗಳೂರು-575003 ಇವರಿಗೆ ಕಲಿಕಾ ಪ್ರಮಾಣ ಪತ್ರದೊಡನೆ ಸಲ್ಲಿಸಲು ಕೋರಲಾಗಿದೆ.

- ಕಾರ್ಯದರ್ಶಿ, ಶ್ರೀ ಕರುಣ್‌ರಾವ್ ಬೆಳ್ಳೆ.

# ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ

**ಅಂಚೆ : ಕೋಡಿಂಬಾಡಿ-574287, ಪುತ್ತೂರು ತಾಲೂಕು, ದ.ಕ.**

ಪ್ರಿಯ ಭಕ್ತಬಾಂಧವರೇ,

ಸ್ವಸ್ತಿ| ಶ್ರೀ ವಿಕೃತಿ ಸಂ|ರದ ಫಾಲ್ಗುಣ ಮಾಸದ ಶುಕ್ಲ ಪಕ್ಷದ ಶುದ್ಧ ಪೌರ್ಣಮಿದಿನ ತಾ.19-03-2011ನೇ ಶನಿವಾರ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಶ್ರೀ ದೇವಳದಲ್ಲಿ

**"ಪ್ರತಿಷ್ಠಾ-ಮಹೋತ್ಸವ"** ಜರಗಲಿದೆ.

ಭಕ್ತಾಭಿಮಾನಿಗಳಾದ ತಾವೆಲ್ಲರೂ ಈ ದೇವತಾ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ತನು-ಮನ-ಧನಗಳೊಂದಿಗೆ ಸಹಕರಿಸಿ, ಶ್ರೀ ದೇವಿಯ ತೀರ್ಥಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುವ,

**ಯಂ. ನಾಗೇಶ ಶರ್ಮ, ಅರ್ಚಕರು** **ಆಡಳಿತ ಮಂಡಳಿ**

**ಮೊಬೈಲ್ : 9901247080**


# ದೇವಿಕೃಪಾ ಏಜೆನ್ಸೀಸ್, ನಂದಿಕೂರು



ಫೋನ್ : 2556536 (R), 2555466 (0)

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ| ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

# PRAMOD
AUTOMOBILES
KARANGALPADY, MANGALORE -575 003.

*30 Years of Service*

Ph : 2493633 (0)
2493633 (H.O.)
2212723 (R)
Mobile : 9448260225

: Wholesale & Retail Dealers in :
2 & 3 WHEELERS SPARES & ACCESSORIES

Prop. : Ln.K. HARSHA KUMAR

# Buying and selling shares as easy as checking your emails

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)


# ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

## ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಬುಧವಾರ : **"ಸೌಂದರ್ಯಲಹರಿ ಪಾರಾಯಣ"** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.22-03-2011) "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

2ನೇ ಶನಿವಾರ : **ತಾ.09-04-2011 "ಗಮಕವಾಚನ" ಸಂಜೆ ಗಂಟೆ 5-00ರಿಂದ (ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಬಾರ್ಕೂರು ನಾಗೇಶ ರಾವ್‌ರವರಿಂದ)**

**ತಾ.24-03-2011 ಫಾಲ್ಗುಣ ಮಾಸ ಕೃಷ್ಣಪಕ್ಷ ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.26-03-2011ರ ಮೂಲಾನಕ್ಷತ್ರ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ ಗಂಟೆ 5-00ರಿಂದ 6-00ರ ವರೆಗೆ) ಸದ್ಭಕ್ತರು ಸಹಕರಿಸಬೇಕಾಗಿ ವಿನಂತಿ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

# ಶ್ರೀ ಬಾಲಗಣಪತಿ, ಪ್ರಸನ್ನಪಾರ್ವತಿ ದೇವಸ್ಥಾನ

**ಉದಯಾದ್ರಿ, ಪಡುಬಿದ್ರಿ**

ಆತ್ಮೀಯರೇ,

ಪಡುಬಿದ್ರಿ ಶ್ರೀ ಬಾಲಗಣಪತಿ, ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಪ್ರಸಕ್ತ ವರ್ಷದ ಸಾಲಿನಿಂದ "ವೈದಿಕ ಶಿಬಿರ"ವು ತಾ.12-04-2011ನೇ ಮಂಗಳವಾರ ಬೆಳಿಗ್ಗೆ ಪ್ರಾರಂಭಗೊಂಡು ತಾ.20-04-2011ನೇ ಬುಧವಾರದ ವರೆಗೆ ಜರಗಲಿರುವುದು. ಶಿಬಿರಾರ್ಥಿಗಳು ಶಿಬಿರಕ್ಕೆ ಬರುವಾಗ ಪಂಚಪಾತ್ರೆ, ಹರಿವಾಣ, ತಂಬಿಗೆ, ಉಟ್ಟುಕೊಳ್ಳುವ ವಸ್ತ್ರ ಹಾಗೂ ವಾಸವ್ಯಕ್ಕೆ ಬೇಕಾದ ಬಟ್ಟೆಬರೆಗಳೊಂದಿಗೆ ತಾ.12-04-2011ರ ಬೆಳಿಗ್ಗೆ ಬರಬೇಕು. ಇತರ ವ್ಯವಸ್ಥೆ ಉಚಿತ. ಸಮಾಜ ಬಾಂಧವರು ಉದಾರ ಧನಸಹಾಯ ನೀಡಿ ಶಿಬಿರವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸುತ್ತೇವೆ.

**- ಆಡಳಿತ ಮೊಕ್ತೇಸರರು,**
**ಶ್ರೀ ಬಾಲಗಣಪತಿ, ಪ್ರಸನ್ನ ಪಾರ್ವತಿ ದೇವಸ್ಥಾನ, ಉದಯಾದ್ರಿ, ಉಡುಪಿ.**




# RAJESH POWER PRESS
PRINTERS & PUBLISHERS
DARBE, PUTTUR, DA. KA. -574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

**QUALITY FIRST AND ALWAYS**

**ಎಮ್. ದೇವಾನಂದ್ ಭಟ್**
Cell : 9845644556

# ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೋ

ಉತ್ತಮ ಗುಣಮಟ್ಟದ ಫೋಟೋಗ್ರಾಫಿಗಾಗಿ ಸಂಪರ್ಕಿಸಿರಿ



**ಬೆಳ್ವಾಯಿ-574213**
(08258)-276177 (O), (918258)-324133 (O), 276777 (R)
**ಎಡಪದವು - 574 164** (0824)-256374 (O) ಮಂಗಳೂರು, ದ.ಕ.

# ರಾಮಾ ಅಟೋಮೊಬೈಲ್ಸ್

**ಮಾರುತಿ ವಾಹನ ತಜ್ಞರು**

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.

**ಫೋನ್ : 2454355, ಮೊಬೈಲ್ : 94485 45702**



ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ




Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org